# ಕನ್ನಡ ಪೋಸ್ಟ್

KANNADA POST | ಇದು ಸುದ್ದಿ ವಿಳಾಸ | ಕನ್ನಡ ದಿನಪತ್ರಿಕೆ

ಸಂಪಾದಕ : ಮಂಜು ಬನವಾಸೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 37 | Pages. 2 | Date: 04-01-2026, SUNDAY | RNI NO: KARKAN/2024/89601 | Kannada Daily

ಸಂಪುಟ : 02 – ಸಂಚಿಕೆ : 37 – ಪುಟಗಳು : 2 | 04-01-2026 | ಭಾನುವಾರ | Ph: 8762954248 | ದರ : ₹1


# ಸಾವಯವ ಕೃಷಿ ಅಣುಬಾಂಬ್‌ನಷ್ಟೇ ಮಾರಕ

## ಪುಷ್ಪಗಿರಿ ಮಠದಲ್ಲಿ ನೈಸರ್ಗಿಕ ಕೃಷಿ ಕಾರ್ಯಾಗಾರ | ಸುಭಾಷ್ ಪಾಳೇಕರ್ ಅಭಿಮತ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಳೇಬೀಡು: ಮಾನವನ ಅನುಕರಣೀಯ ಪದ್ಧತಿ ವಿನಾಶಕ್ಕೆ ದಾರಿ ಮಾಡಿಕೊಡುತ್ತಿದೆ, ಸಾವಯವ ಕೃಷಿಯು ಅಣುಬಾಂಬ್ ಸಿಡಿಸಿದಷ್ಟು ಅಪಾಯಕಾರಿ ಎಂದು ನೈಸರ್ಗಿಕ ಕೃಷಿ ತಜ್ಞ ಸುಭಾಷ್ ಪಾಳೇಕರ್ ಅಭಿಪ್ರಾಯಪಟ್ಟರು.

ಶ್ರೀ ಕ್ಷೇತ್ರ ಪುಷ್ಪಗಿರಿ ಮಠದಲ್ಲಿ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ಶನಿವಾರ ನಡೆದ ನೈಸರ್ಗಿಕ ಕೃಷಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿ, ಮಿತಿ ಮೀರಿದ ಅನುಕರಣೀಯ ಪ್ರವೃತ್ತಿಯಿಂದಾಗಿ ಸಹಜ ಜೀವನ ನಡೆಸಲು ಸಾಧ್ಯವಾಗುತ್ತಿಲ್ಲ. ಮನುಷ್ಯ ಅಗೋಚರವಾಗಿ ನಿಯಂತ್ರಣಕ್ಕೆ ಒಳಪಟ್ಟು ಬಹುರಾಷ್ಟ್ರೀಯ ಕಂಪನಿಗಳ ಕಪಿಮುಷ್ಟಿಗೆ ಸಿಲುಕಿದ್ದಾನೆ ಎಂದರು. ಭಾರತದ ಆರ್ಥಿಕತೆ ಸತ್ತಿದೆ ಎಂದು ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಭಾರತದ ಆರ್ಥಿಕತೆ ಅಮೇರಿಕಾಕ್ಕಿಂತ ಬಲವಾಗಿದೆ ಎಂಬುದನ್ನು ಪ್ರತಿಪಾದಿಸುತ್ತೇನೆ. ಕೃಷಿ ಕ್ಷೇತ್ರವೂ ಲಾಭದಾಯಕವಾಗಿದೆ ಎಂದರು.

ಆದರೆ ವೈಜ್ಞಾನಿಕ ಪದ್ಧತಿ ಅಳವಡಿಸಿಕೊಳ್ಳುವುದು ಮುಖ್ಯ. ರಾಸಾಯನಿಕ ಬಳಕೆಗಿಂತ ಸಾವಯವ ಕೃಷಿಯಿಂದ ಭೂಮಿಗೆ ಹೆಚ್ಚಿನ ಆಘಾತವಾಗುತ್ತದೆ. ಪುಷ್ಪಗಿರಿ ಮಠದ ಶ್ರೀ ಸೋಮಶೇಖರ ಸ್ವಾಮೀಜಿ ಮಾತನಾಡಿ, ಜನರು ಉಳಿಯಬೇಕು ಎಂಬ ಮನೋಭಾವವನ್ನು ರೈತರಲ್ಲಿ ಮಾತ್ರ ಕಾಣಬಹುದಾಗಿದೆ. ಭೂಮಿಯ ಉಳಿವಿಗಾಗಿ ಕೆಲಸ ಮಾಡುತ್ತಿರುವ ಸುಭಾಷ್ ಪಾಳೆಕರ್ ಅವರ ಕಾರ್ಯವೈಖರಿ ಶ್ಲಾಘನೀಯ. ಕೃಷಿ ಒಂದು ಪವಿತ್ರ ಕಸುಬು, ಕೃಷಿಯಿಲ್ಲದೆ ಜನರ ಜೀವನ ಸಾಧ್ಯವಿಲ್ಲ. ಭೂಮಿಯನ್ನು ಉಳಿಸಿಕೊಂಡು ರೈತರು ಬದುಕುವಂತಾಗಬೇಕು. ಈ ನಿಟ್ಟಿನಲ್ಲಿ ಕಾರ್ಯಾಗಾರ ನಡೆಯುತ್ತಿದೆಯೆಂದರು.

ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಮಾತನಾಡಿ, ಸುಭಾಷ್ ಪಾಳೇಕರ್ ಅವರ ವಿಚಾರವನ್ನು ಪತ್ರಿಕೆಗಳಲ್ಲಿ ಓದಿದ್ದೇವು.



> ಜನರಿಗೆ ವಿಷಮುಕ್ತ ಆಹಾರ ಪೂರೈಕೆ, ರೈತರನ್ನು ಸಾಲ ಮುಕ್ತರನ್ನಾಗಿ ಮಾಡುವುದು ಹಾಗೂ ರೈತರ ಆತ್ಮಹತ್ಯೆ ತಪ್ಪಿಸಲು ನೈಸರ್ಗಿಕ ಕೃಷಿ ಕಾರ್ಯಾಗಾರ ನಡೆಸಲಾಗುತ್ತಿದೆ. ಜಿಲ್ಲೆಯ ರೈತರು ಭಾಗವಹಿಸಿ ಸದುಪಯೋಗ ಪಡೆಯಬೇಕು.
>
> **- ರವಿವರ್ಮ, ನಿವೃತ್ತ ಅಡ್ವೋಕೇಟ್ ಜನರಲ್**

ಸಾಮಾಜಿಕ ಜಾಲತಾಣದಲ್ಲಿ ನೋಡಿದ್ದೆವು. ಈಗ ವೇದಿಕೆಯಲ್ಲಿ ಅವರ ಜೊತೆಯಲ್ಲಿರುವುದು ಸಂತಸ ತಂದಿದೆ. ರಸಗೊಬ್ಬರ, ಕೀಟ, ಕ್ರಿಮಿ ಹಾಗೂ ಶಿಲೀಂಧ್ರ ನಾಶಕಗಳಿಗೆ ರೈತರು ಬಂಡವಾಳ ಹಾಕುತ್ತಿದ್ದಾರೆ. ಶೂನ್ಯ ಬಂಡವಾಳದ ನೈಸರ್ಗಿಕ ಕೃಷಿಯಿಂದ ರೈತರು ಬದುಕು ಹಸನಾಗುತ್ತದೆ ಎಂದರು.

ಸಾಮೂಹಿಕ ಅಧ್ಯಕ್ಷಿಯ ಮಂಡಳಿ ಸದಸ್ಯೆ ಅನುಸೂಯಮ್ಮ ಮಾತನಾಡಿ, ಬಹುರಾಷ್ಟ್ರೀಯ ಕಂಪನಿಗಳನ್ನು ಉದ್ಧಾರ ಮಾಡುವಂತಹ ಬೀಜ ಕಾಯ್ದೆ ಜಾರಿಗೆ ಬಂದರೆ ಪಾರಂಪಾರಿಕ ರೈತರು ಬದುಕುವುದು ಕಷ್ಟ. ಕಾಯ್ದೆ ಅನುಷ್ಠಾನ ಆಗದಂತೆ ರೈತರು ಹೋರಾಡಬೇಕಾಗಿದೆ ಎಂದರು.

ರಾಜ್ಯ ರೈತ ಸಂಘ ಸಾಮೂಹಿಕ ಅಧ್ಯಕ್ಷಿಯ ಮಂಡಳಿ ಸದಸ್ಯೆ ಚುಕ್ಕಿ ನಂಜುಂಡಸ್ವಾಮಿ ಮಾತನಾಡಿದರು. ಸದಸ್ಯ ಕೆ.ಟಿ.ಗಂಗಾಧರ ರೈತ ಧ್ವಜಾರೋಹಣ ನೆರವೇರಿಸಿದರು. ಪಾರಂಪರಿಕ ಕೃಷಿಗೆ ಹೆಸರಾದ ಕೊಟ್ಟೂರಿನ ರೈತ ಮಹಿಳೆಯರು ಜನಪದ ಗಾಯನದ ಮೂಲಕ ರಾಶಿ ಪೂಜೆ ನೆರವೇರಿಸಿದರು.

ನೇಪಾಳ, ಶ್ರೀಲಂಕಾ, ಕಾಂಬೋಡಿಯಾ ದೇಶದ ರೈತರೊಂದಿಗೆ ದೇಶದ ವಿವಿಧ ಭಾಗದ ರೈತರು ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು. ಚಂದನ್ ಕುಮಾರ್ ಗಾಯನ ಸುಧೆ ಹರಿಸಿದರು.

ಶಾಸಕ ಹೆಚ್.ಕೆ.ಸುರೇಶ್, ಅಂತಾರಾಷ್ಟ್ರೀಯ ರೈತ ಮುಖಂಡರಾದ ನೇಪಾಳದ ಯದುವೀರ್ ಸಿಂಗ್, ಬಿ.ಸಿ.ಕೃಷ್ಣ, ವಿಮಾ ಕ್ಯಾಪಸೀಯಾ, ಪುಷ್ಪಗಿರಿ ಮಠದ ಕಾರ್ಯದರ್ಶಿ ಎಸ್.ಎಚ್.ರಾಜಶೇಖರ್, ನಿರ್ಮಲ ಗೋಮಾತೆ ಟ್ರಸ್ಟ್ ಮುಖ್ಯಸ್ಥ ಅನಂತರಾವ್, ಹೊನ್ನೂರು ಪ್ರಕಾಶ್, ಅರೇಹಳ್ಳಿ ರಾಜೇಗೌಡ, ಕಣಗಾಲ್ ಮೂರ್ತಿ ಇದ್ದರು.

### ಸಿದ್ದರಾಮಯ್ಯ ಸರ್ಕಾರ ಉಳಿಯಲ್ಲ

ಪ್ರಸ್ತುತ ಸಿದ್ದರಾಮಯ್ಯ ಅವರ ಸರ್ಕಾರ ಉಳಿಯಬೇಕೆಂದರೆ ರೈತಪರ ಯೋಜನೆ ಜಾರಿಯಾಗಬೇಕೆಂದು ರಾಜ್ಯ ರೈತ ಸಂಘ ಸಾಮೂಹಿಕ ಅಧ್ಯಕ್ಷಿಯ ಮಂಡಳಿ ಸದಸ್ಯ ಕೆ.ಟಿ.ಗಂಗಾಧರ್ ಎಚ್ಚರಿಕೆ ನೀಡಿದರು.

ಎಪಿಎಂಸಿ ಕಾಯ್ದೆ, ಕರಾರು ಕೃಷಿ ಪದ್ಧತಿ ಹಾಗೂ ಭೂಸುಧಾರಣಾ ಕಾಯ್ದೆ ಕೈಬಿಡಬೇಕು. ಇಲ್ಲದಿದ್ದರೆ ಸಿದ್ದರಾಮಯ್ಯ ಅವರಿಗೆ ಉಳಿಗಾಲವಿಲ್ಲ. ಪ್ರೊ. ನಂಜುಂಡಸ್ವಾಮಿ ಮನಸ್ಸು ಮಾಡಿದ್ದರೆ ಎರಡೂ ಬಾರಿ ಮುಖ್ಯಮಂತ್ರಿ ಆಗುತ್ತಿದ್ದರು. ನಾವೆಲ್ಲ ಹಲವು ಬಾರಿ ಮಂತ್ರಿ ಶಾಸಕರಾಗುತ್ತಿದ್ದೆವು. ನಂಜುಂಡಸ್ವಾಮಿ ಅವರಿಗೆ ರೈತಪರ ಕಾಳಜಿ ಇತ್ತು. ಅವರಿಗೆ ಅಧಿಕಾರ ಬೇಕಿರಲಿಲ್ಲ. ಪಾಳೆಕರ್ ಕೃಷಿ ಪದ್ಧತಿಯನ್ನು ಎಲ್ಲಾ ವಿಶ್ವವಿದ್ಯಾಲಯ ಶಾಲಾ ಕಾಲೇಜುಗಳಲ್ಲಿ ಪಠ್ಯ ವಿಷಯವಾಗಿ ಓದುವಂತಾಗಬೇಕು ಎಂದು ಆಗ್ರಹಿಸಿದರು.

# ಮಾನವನ ಬದುಕಿಗೆ ಬೆಳಕು ಕರುಣಿಸಿದ ಕುವೆಂಪು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ರಾಷ್ಟ್ರಕವಿ ಕುವೆಂಪು ಅವರು ರಾಮಾಯಣ ದರ್ಶನಂ ಎಂಬ ಮಹಾಕಾವ್ಯವನ್ನೂ ಅದೇ ರೀತಿ ಮಕ್ಕಳ ಸಾಹಿತ್ಯವನ್ನು ಬರೆದರು. ಮಾನವನ ಬದುಕಿಗೆ ಹೊಸ ಬೆಳಕು ನೀಡಿದ ಮಹಾಚಿಂತಕ ಕುವೆಂಪು ಎಂದು ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಡಾ.ಎಚ್.ಎಲ್.ಮಲ್ಲೇಶಗೌಡ ಹೇಳಿದರು. ನಗರದ ಆದಿಚುಂಚನಗಿರಿ ಮಠದ ನವನಾಥ ಯಾಗ ಮಂಟಪದಲ್ಲಿ ಶನಿವಾರ ಹಮ್ಮಿಕೊಂಡಿದ್ದ 136ನೇ ಗುರು ತೋರಿದ ದಾರಿ ತಿಂಗಳ ಮಾಮನ ತೇರು ಹುಣ್ಣಿಮೆ ಕಾರ್ಯಕ್ರಮದಲ್ಲಿ ಕುವೆಂಪು ಸ್ಮರಣೆ ಉಪನ್ಯಾಸ ನೀಡಿದರು.

ಜಗತ್ತಿನ ದುಃಖವನ್ನು ಅರ್ಥಮಾಡಿಕೊಳ್ಳುವ ಶಕ್ತಿಯನ್ನು ಸಾಹಿತ್ಯದ ಮೂಲಕ ಸಮಾಜಕ್ಕೆ ನೀಡಿದವರು ಕುವೆಂಪು. 10ನೇ ಶತಮಾನದಲ್ಲಿ ಪಂಪ ಯುಗ, 15ನೇ ಶತಮಾನವನ್ನು ಕುಮಾರ ಯುಗ, 12ನೇ ಶತಮಾನವನ್ನು ಬಸವ ಯುಗ ಮತ್ತು 21ನೇ ಶತಮಾನವನ್ನು ಕುವೆಂಪು ಯುಗ ಎಂದು ಕರೆಯುತ್ತೇವೆ. ರಾಮಾಯಣ ದರ್ಶನಂ ಎಂಬ ಮಹಾಕಾವ್ಯ ನಮ್ಮನ್ನು ಸಾಕಷ್ಟು ಚಿಂತನೆಗೆ ದೂಡುತ್ತದೆ. ಕತ್ತಲೆಯಲ್ಲಿರುವವರಿಗೆ ಮಾತ್ರ ಚಂದ್ರನ ಮೌಲ್ಯ ತಿಳಿಯುವಂತೆ, ಸಮಾಜ ಸಂಕಷ್ಟದಲ್ಲಿರುವಾಗ ಕುವೆಂಪು ಚಿಂತನೆಯ ಮಹತ್ವ ಗೊತ್ತಾಗುತ್ತದೆ ಎಂದರು.



ಭಾರತದಲ್ಲಿ ಯಾವುದೇ ಕವಿ ಸಾಹಿತ್ಯ ರಚನೆ ಮಾಡುವಾಗ ಕುವೆಂಪು ಅವರ ಪ್ರೇರಣೆ ಅಜ್ಞಾತವಾಗಿ ಕೆಲಸ ಮಾಡುತ್ತದೆ. ಮಹಾಕಾವ್ಯ, ನಾಟಕ, ಮಕ್ಕಳ ಸಾಹಿತ್ಯ, ವಿಮರ್ಶೆ ಸೇರಿ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿ ಅಸಾಧಾರಣ ಎತ್ತರ ತಲುಪಿದವರು ಕುವೆಂಪು. 35ನೇ ವಯಸ್ಸಿಗೆ ಮಹಾಕಾವ್ಯ ರಚಿಸಿದ ಅವರು, 20ನೇ ವಯಸ್ಸಿನಲ್ಲಿ ನಾಡಗೀತೆಯನ್ನು ಬರೆದಿರುವುದು ಅಪರೂಪದ ಸಾಧನೆ ಎಂದರು.

ಇಲ್ಲಿ ಯಾರೂ ಮುಖ್ಯರಲ್ಲ, ಯಾರೂ ಅಮುಖ್ಯರಲ್ಲ ಎಂಬುದೇ ಅವರ ಸಾಹಿತ್ಯದ ತಿರುಳು. ಲೋಕದಿಂದ ನಿಂದನೆಗೆ ಗುರಿಯಾದ ಕೈಕೆಯಿ ಮತ್ತು ಮಂಥರೆಯಂತಹ ಪಾತ್ರಗಳಲ್ಲೂ ಮಾನವೀಯತೆ ಮತ್ತು ಮಮತೆಯನ್ನು ಹುಡುಕಿದ ಕುವೆಂಪು, ಬಾಹ್ಯ ಸೌಂದರ್ಯಕ್ಕಿಂತ ಆಂತರಿಕ ಸೌಂದರ್ಯವೇ ಮಹತ್ವವೆಂದು ಸಾರಿದ್ದಾರೆ ಎಂದರು.

ಹಾಸನದ ಆದಿಚುಂಚನಗಿರಿ ಮಠದಲ್ಲಿ ನಡೆದ 136 ಹುಣ್ಣಿಮೆ ಕಾರ್ಯಕ್ರಮಗಳು ವ್ಯರ್ಥವಾಗಿಲ್ಲ. ಅವುಗಳು ಅನೇಕ ಫಲಶೃತಿಗಳನ್ನು ನೀಡಿವೆ. ನೌಕರರು, ಶಿಕ್ಷಕರು ಹಾಗೂ ಭಕ್ತರು ತಮ್ಮೊಳಗಿನ ಶಕ್ತಿಯನ್ನು ಗಟ್ಟಿಗೊಳಿಸಿಕೊಂಡಿದ್ದು, ಭಕ್ತರ ನಿರ್ಭಯತೆ ಮತ್ತು ನಿರ್ಮೋಹತೆ ಇದರಿಂದಲೇ ಬೆಳೆಯಲು ಸಾಧ್ಯವಾಯಿತು. ಈ ಎಲ್ಲಾ ಪರಿವರ್ತನೆಗೆ ಶಂಭುನಾಥ ಸ್ವಾಮೀಜಿಯವರೇ ಕಾರಣ. ರಾವಣನನ್ನು ಮಹಾಶಿಲ್ಪಿಯಾಗಿ ರೂಪಿಸಿದ ಕವಿ ಕುವೆಂಪುವಿನಂತೆ, ನಮ್ಮನ್ನು ಮಾನವೀಯತೆಯ ಮೌಲ್ಯಗಳಲ್ಲಿ ರೂಪಿಸಿದವರು ಶಂಭುನಾಥ ಸ್ವಾಮೀಜಿ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಜವೇನಹಳ್ಳಿ ಮಠದ ಶ್ರೀ ಸಂಗಮೇಶ್ವರ ಸ್ವಾಮೀಜಿ, ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಮಠದ ವ್ಯವಸ್ಥಾಪಕ ಚಂದ್ರಶೇಖರ್ ಸ್ವಾಗತಿಸಿದರು.

# ಯೊಧರ ಶಿಸ್ತು ಎಲ್ಲರಿಗೂ ಪ್ರೇರಣೆ: ಸ್ವರೂಪ್



ಹಾಸನ: ಯೋಧರ ತ್ಯಾಗ, ಧೈರ್ಯ, ಶಿಸ್ತು ಎಲ್ಲರ ಬದುಕಿಗೂ ಪ್ರೇರಣೆ ಎಂದು ಸ್ಥಳೀಯ ಶಾಸಕ ಹೆಚ್.ಪಿ. ಸ್ವರೂಪ್ ಪ್ರಕಾಶ್ ಅಭಿಪ್ರಾಯಪಟ್ಟರು.

ನಗರದ ಬೂವನಹಳ್ಳಿ ಸಮೀಪದ ವರಲಿಕೊಪ್ಪಲು ಗ್ರಾಮದಲ್ಲಿ ನಿವೃತ್ತ ಯೋಧ ಸಿ.ರವಿ ಅವರ ಅಭಿನಂದನಾ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಯೋಧರ ಜೀವನ ಸುಲಭವಾಗಿರುವುದಿಲ್ಲ. ದೇಶದ ನಾಗರೀಕರು ಸುರಕ್ಷಿತವಾಗಿರಲೆಂದು ಅವನು ಗಡಿಯಲ್ಲಿ ನಿದ್ರೆ ಇಲ್ಲದೆ ಕಾವಲು ನಿಲ್ಲುತ್ತಾರೆ.

ನಮ್ಮ ಹಬ್ಬಗಳು ಸಂಭ್ರಮವಾಗಿರಲೆಂದು ಅವನು ತನ್ನ ಕುಟುಂಬದಿಂದ ದೂರವಿರುತ್ತಾನೆ. ಇಂತಹ ತ್ಯಾಗ, ಧೈರ್ಯ, ಶಿಸ್ತಿನ ಬದುಕು ಪ್ರತಿಯೊಬ್ಬ ನಾಗರಿಕನಿಗೂ ಪ್ರೇರಣೆ ಎಂದು ನುಡಿದರು.

ಅಭಿನಂದನಾ ನುಡಿಗಳನ್ನಾಡಿದ ಬೂವನಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಬಿ.ಆರ್ ಬೊಮ್ಮೇಗೌಡ, ಯೋಧರಿಗೆ ನಮ್ಮ ಸಮಾಜದಲ್ಲಿ ವಿಶೇಷ ಸ್ಥಾನಮಾನವಿದೆ. ಅವರ ತ್ಯಾಗ, ಧೈರ್ಯ, ಶೌರ್ಯ ಗುರುತಿಸಿ ಪ್ರತಿಯೊಬ್ಬರೂ ಗೌರವಿಸಬೇಕಿದೆ ಎಂದರು.

ಯೋಧನ ಧೈರ್ಯಕ್ಕೆ ಮೂಲವೇ ಆತನ ಕುಟುಂಬ, ಅವನ ಶೌರ್ಯಕ್ಕೆ ಬೆಂಬಲವೇ ಇವರ ತ್ಯಾಗ. ಯೋಧರ ಕುಟುಂಬದ ಸಹಕಾರ, ತ್ಯಾಗ ಮನೋಭಾವದಿಂದಾಗಿ ಇಂದು ಸಮಾಜದಲ್ಲಿ ಎಲ್ಲರೂ ಸುರಕ್ಷಿತವಾಗಿ ಬದುಕು ಕಟ್ಟಿಕೊಳ್ಳಲು ಸಾಧ್ಯವಾಗಿದೆ ಎಂದರು.

ನಿವೃತ್ತ ಯೋಧರ ಸಂಘದ ಮಾಜಿ ಜಿಲ್ಲಾಧ್ಯಕ್ಷ ಗೋವಿಂದೇಗೌಡ ಮಾತನಾಡಿ, ಯೋಧರು ಸೇವೆಯಿಂದ ನಿವೃತ್ತಿ ಹೊಂದಿದಾಗ ಅವರನ್ನು ಸಮಾಜ ಗೌರವಿಸಿದರೆ ಅವರ ಸೇವೆಗೆ ಸಾರ್ಥಕತೆ ದೊರೆತಂತಾಗುತ್ತದೆ. ಯೋಧರ ಸೇವೆಗೆ ತಕ್ಕುದಾದ ಸಲವತ್ತುಗಳು ಸರ್ಕಾರದಿಂದ ಅವರಿಗೆ ದೊರೆಯಬೇಕು ಆಗ ಮಾತ್ರ ನಿಜವಾದ ಗೌರವ ಸಿಕ್ಕಂತಾಗುತ್ತದೆ ಎಂದರು.

ಬೂವನಹಳ್ಳಿ ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ತುಳಸಿರಾಂ ಮಾತನಾಡಿ, ಭಾರತ ದೇಶ ಇಷ್ಟು ಸುಭದ್ರವಾಗಿರಲು ಯೊಧರ ತ್ಯಾಗ, ಬಲಿದಾನವೇ ಕಾರಣ. ಅವರು ನಮ್ಮೆಲ್ಲರಿಗೂ ಆದರ್ಶಪ್ರಾಯ ಎಂದರು.

ಕಾರ್ಯಕ್ರಮಕ್ಕೂ ಮೊದಲು ನಗರದ ರೈಲ್ವೆ ನಿಲ್ದಾಣಕ್ಕೆ ಬಂದಿಳಿದ ನಿವೃತ್ತ ಯೋಧ ಸಿ.ರವಿ ಅವರನ್ನು ತೆರೆದ ತೆರೆದ ಜೀಪಿನಲ್ಲಿ ಸ್ವಗ್ರಾಮದವರೆಗೂ ಮೆರವಣಿಗೆಯಲ್ಲಿ ಕರೆ ತರಲಾಯಿತು.

ಕಾರ್ಯಕ್ರಮದಲ್ಲಿ ಒಕ್ಕಲಿಗರ ಸಂಘದ ನಿರ್ದೇಶಕ ಎಸ್.ಎಸ್ ರಘುಗೌಡ, ನಗರ ಪಾಲಿಕೆ ಮಾಜಿ ಸದಸ್ಯ ವಾಸುದೇವ್, ತಾಲೂಕು ಪಂಚಾಯತಿ ಮಾಜಿ ಸದಸ್ಯ ಜಯರಾಂ, ದಿನೇಶ್, ಪಿಎಸಿಸಿಎಸ್ ಮಾಜಿ ಅಧ್ಯಕ್ಷ ಮಲ್ಲೇಶ್, ಮುಖಂಡ ಪದ್ಮರಾಜು ಇತರರು ಹಾಜರಿದ್ದರು. ಕುಮಾರಿ ರಕ್ಷಾ ಕಾರ್ಯಕ್ರಮದ ನಿರೂಪಣೆ ನೆರವೇರಿಸಿದರು.

# ಜ.5 ರಿಂದ ಎನ್‌ಎಸ್‌ಎಸ್ ಭಾವೈಕ್ಯತಾ ಶಿಬಿರ

## ಹಿಮ್ಸ್‌ಗೆ 2ನೇ ಬಾರಿಗೆ ಆತಿಥ್ಯ – ದೇಶ ಹಾಗೂ ರಾಜ್ಯದ ಒಟ್ಟು 200 ವಿದ್ಯಾರ್ಥಿಗಳು ಭಾಗಿ: ರಾಜಣ್ಣ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ಭಾರತ ಸರ್ಕಾರ ಹಾಗೂ ಬೆಂಗಳೂರು ಪ್ರಾಂತೀಯ ನಿರ್ದೇಶನಾಲಯ ಇವರ ಆಶ್ರಯದಲ್ಲಿ, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಹಿಮ್ಸ್)ನಲ್ಲಿ ರಾಷ್ಟ್ರೀಯ ಸೇವಾ ಯೋಜನೆ ರಾಷ್ಟ್ರೀಯ ಭಾವೈಕ್ಯತಾ ಶಿಬಿರವನ್ನು ಜ.5 ರಿಂದ 11 ರವರೆಗೆ ಆಯೋಜಿಸಲಾಗಿದೆ ಎಂದು ಹಿಮ್ಸ್ ನಿರ್ದೇಶಕ ಡಾ.ಬಿ.ರಾಜಣ್ಣ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಶನಿವಾರ ಮಾತನಾಡಿ, ರಾಷ್ಟ್ರಮಟ್ಟದ ಈ ಶಿಬಿರವನ್ನು ಎರಡನೇ ಬಾರಿಗೆ ಹಾಸನದಲ್ಲಿ ಆಯೋಜಿಸುವ ಅವಕಾಶ ದೊರೆತಿರುವುದು ಹಿಮ್ಸ್ ಸಂಸ್ಥೆ ಹಾಗೂ ಜಿಲ್ಲೆಗೆ ಹೆಮ್ಮೆಯ ವಿಷಯವಾಗಿದೆ ಎಂದರು.

ದೇಶದಲ್ಲಿ ಜಾತಿ, ಧರ್ಮ ಮತ್ತು ಪ್ರಾಂತೀಯ ಭೇದ ಭಾವದಿಂದ ಉಂಟಾಗುತ್ತಿರುವ ವೈಮನಸ್ಸುಗಳನ್ನು ನಿವಾರಿಸಿ, ಶಾಂತಿ, ಸೌಹಾರ್ದತೆ ಹಾಗೂ ರಾಷ್ಟ್ರೀಯ ಏಕತೆ ಬಲಪಡಿಸುವ ಉದ್ದೇಶದಿಂದ ಪ್ರತಿವರ್ಷ ಕೇಂದ್ರ ಸರ್ಕಾರದ ವತಿಯಿಂದ ಈ ರಾಷ್ಟ್ರೀಯ ಭಾವೈಕ್ಯತಾ ಶಿಬಿರ ಆಯೋಜಿಸಲಾಗುತ್ತಿದೆ.





ವಿದ್ಯಾರ್ಥಿಗಳಲ್ಲಿ ಸಾಮರಸ್ಯ ಹಾಗೂ ಸಹಬಾಳ್ವೆಯ ಮನೋಭಾವ ಬೆಳೆಸುವ ಮೂಲಕ ಸದೃಢ ಭಾರತ ನಿರ್ಮಾಣವೇ ಈ ಶಿಬಿರದ ಮುಖ್ಯ ಉದ್ದೇಶವಾಗಿದೆ. ಈ ವರ್ಷ ದೇಶದ 10 ರಾಜ್ಯ ಮತ್ತು 5 ಕೇಂದ್ರಾಡಳಿತ ಪ್ರದೇಶಗಳ ಒಟ್ಟು 15 ಆಯ್ದ ಕಾಲೇಜುಗಳಿಗೆ ಈ ಶಿಬಿರ ಆಯೋಜಿಸುವ ಅವಕಾಶ ಲಭಿಸಿದೆ. ಕರ್ನಾಟಕದಿಂದ ಹಿಮ್ಸ್ 2ನೇ ಬಾರಿಗೆ ಈ ಗೌರವ ದೊರೆತಿದೆ.

ದೇಶದ ವೈದ್ಯಕೀಯ ಕಾಲೇಜುಗಳ ಪೈಕಿ ಎರಡನೇ ಬಾರಿ ಈ ಶಿಬಿರ ಆಯೋಜಿಸುತ್ತಿರುವ ಹೆಗ್ಗಳಿಕೆ ಹಿಮ್ಸ್‌ಗೆ ಸಲ್ಲುತ್ತದೆ ಎಂದರು.

ಶಿಬಿರದಲ್ಲಿ ದೇಶದ 10 ರಾಜ್ಯಗಳಿಂದ 100 ಶಿಬಿರಾರ್ಥಿಗಳು ಹಾಗೂ ಕರ್ನಾಟಕದ 13 ವಿಶ್ವವಿದ್ಯಾನಿಲಯಗಳ 100 ಶಿಬಿರಾರ್ಥಿಗಳು ಸೇರಿ ಒಟ್ಟು 200 ಶಿಬಿರಾರ್ಥಿಗಳು ಮತ್ತು 10 ಶಿಬಿರಾಧಿಕಾರಿಗಳು ಭಾಗವಹಿಸಲಿದ್ದಾರೆ. ಶಿಬಿರಾರ್ಥಿಗಳಿಗೆ ಸಂಸ್ಥೆ ಆವರಣದಲ್ಲಿ ಒಂದು ವಾರ ವಾಸ್ತವ್ಯ ವ್ಯವಸ್ಥೆ ಕಲ್ಪಿಸಲಾಗಿದೆ. ಶಿಬಿರದ ಉದ್ಘಾಟನಾ ಸಮಾರಂಭ ಜ.5 ರಂದು ಹಿಮ್ಸ್ ಸಭಾಂಗಣದಲ್ಲಿ ನಡೆಯಲಿದೆ ಎಂದರು.

ಜಿಲ್ಲಾಧಿಕಾರಿ ಕೆ.ಎಸ್.ಲತಾ ಕುಮಾರಿ ಉದ್ಘಾಟಿಸಲಿದ್ದಾರೆ. ವಿವಿಧ ರಾಜ್ಯಗಳ ಸಾಂಸ್ಕೃತಿಕ ಮೆರವಣಿಗೆಯನ್ನು ಎಸ್ಪಿ ಅವರು ಉದ್ಘಾಟಿಸಲಿದ್ದು, ಹಿಮ್ಸ್ ನಿರ್ದೇಶಕ ಡಾ. ರಾಜಣ್ಣ ಅಧ್ಯಕ್ಷತೆ ವಹಿಸಲಿದ್ದಾರೆ. ಜಿಪಂ ಸಿಇಒ ಪೂರ್ಣಿಮಾ ಸೇರಿ ಹಲವು ಭಾಗಿಯಾಗುವರು ಎಂದರು.

ಶಿಬಿರದ ಅವಧಿಯಲ್ಲಿ ಪ್ರತಿದಿನ ಬೆಳಿಗ್ಗೆ ಧ್ವಜಾರೋಹಣ, ಯೋಗಾಭ್ಯಾಸ, ಪ್ರಥಮ ಚಿಕಿತ್ಸೆ ಹಾಗೂ ವಿಪತ್ತು ನಿರ್ವಹಣೆ, ಗಾಂಧಿ ಮತ್ತು ಯುವಜನತೆ, ಸ್ವಯಂ ರಕ್ಷಣೆ ಹಾಗೂ ಸೈಬರ್ ಅಪರಾಧ ತಡೆ ಕುರಿತು ತರಬೇತಿ ಕಾರ್ಯಕ್ರಮ ನಡೆಯಲಿವೆ. ಶಿಬಿರಾರ್ಥಿಗಳು ಶ್ರಮದಾನ, ಬೀದಿ ನಾಟಕ ಮೂಲಕ ಜನಜಾಗೃತಿ ಕಾರ್ಯಕ್ರಮ, ಸಕಲೇಶಪುರದ ಆಯ್ದ ಗ್ರಾಮಗಳಿಗೆ ಭೇಟಿ, ಜಿಲ್ಲೆಯ ಐತಿಹಾಸಿಕ ಸ್ಥಳಗಳಾದ ಬೇಲೂರು, ಹಳೇಬೀಡು ಸೇರಿ ವಿವಿಧ ಸ್ಥಳಗಳಿಗೆ ಭೇಟಿ ನೀಡಲಿದ್ದಾರೆ. ಪ್ರತಿದಿನ ಸಂಜೆ ವಿವಿಧ ರಾಜ್ಯ ಪ್ರತಿನಿಧಿಸುವ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿವೆ. ಶಿಬಿರದ ಸಮಾರೋಪ ಸಮಾರಂಭ ಜ.11 ರಂದು ನಡೆಯಲಿದೆ. ಶಿಬಿರದ ಯಶಸ್ಸಿಗಾಗಿ ಹಿಮ್ಸ್ ಕಾರ್ಯಕಾರಿ ಮಂಡಳಿ ಸಂಪೂರ್ಣ ಸಿದ್ಧ ಮಾಡಿಕೊಂಡಿದ್ದು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಮನವಿ ಮಾಡಿದರು. ಪತ್ರಿಕಾಗೋಷ್ಠಿಯಲ್ಲಿ ಡಾ. ರಾಘವೇಂದ್ರ ಪ್ರಸಾದ್, ಡಾ. ಪ್ರಕಾಶ್, ಹಿಮ್ಸ್ ರಾಷ್ಟ್ರೀಯ ಭಾವಕೈತಾ ಶಿಬಿರಾಧಿಕಾರಿ ನಿಚಿತ ಕುಮಾರಿ ಇದ್ದರು.



ಅರಕಲಗೂಡು ತಾಲೂಕಿನ ದೊಡ್ಡಮಗ್ಗೆ ಹೋಬಳಿ ಬೆಳವಾಡಿ ಗ್ರಾಮದಲ್ಲಿ ಮುಖ್ಯ ಶಿಕ್ಷಕರಾಗಿ ಕೆಲಸ ನಿರ್ವಹಿಸುತ್ತಿದ್ದ ಜಗದೀಶ್ ಎಲ್ ಇವರಿಗೆ ಗ್ರಾಮಸ್ಥರು ಅದ್ದೂರಿಯಾಗಿ ಬೀಳ್ಕೊಡುಗೆ ನೀಡಿದರು. ಶಿಕ್ಷಕ ವೃತ್ತಿಯಲ್ಲಿ ಸಾಕಷ್ಟು ಅನುಭವ ಹೊಂದಿದ್ದ ಜಗದೀಶ್, ಬೆಳವಾಡಿ ಶಾಲೆಯಲ್ಲಿ ಮುಖ್ಯ ಶಿಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಕಳೆದ ಡಿ.31 ಎಸ್‌ಡಿಎಂಸಿ ಹಾಗೂ ಮಾಜಿ ಅಧ್ಯಕ್ಷರು, ಸದಸ್ಯರು ಹಾಗೂ ಪೋಷಕರು ಸನ್ಮಾನಿಸಿ ಕಳಿಸಿಕೊಟ್ಟರು. ಗ್ರಾಮದ ನಂಜುಂಡೇಗೌಡ(ಗಣೇಶ್)ಹಾಗೂ ಗ್ರಾಪಂ ಸದಸ್ಯರು, ಕಿಟ್ಟಿ, ಮಹಿಳೆಯರ ಸಮಕ್ಷಮದಲ್ಲಿ ಕಾರ್ಯಕ್ರಮ ನಡೆಯಿತು.

# ರೋಗ ತಂದವರ್ಯಾರು

ಕವಿತೆ

ಮೊಲೆ ಹಾಲಿನ ಬದಲಾಗಿ ಸೌಂದರ್ಯ ಹಾಳಾಗುವುದೆಂದು
ನಿಪ್ಪಲ್ ಹಾಲು ತಂದವರ್ಯಾರು
ಕಾಳುಗಳ ಇಟ್ಟಿನ ಬದಲಾಗಿ ಸಿರೋಲ್ಯಾಕ್ಸ್ ತಂದವರ್ಯಾರು
ಮಡಿಕೆ ನೀರಿನ ಬದಲಾಗಿ ಹಳಸು ಪೆಟ್ಟಿಗೆ ತಂದವರ್ಯಾರು
ಪ್ರಕೃತಿ ದತ್ತವಾಗಿ ಬೆಳೆಯುತ್ತಿದ್ದ ಬೆಳಗೆ ಕೆಮಿಕಲ್ ಗೊಬ್ಬರ ತಂದವರ್ಯಾರು
ಪುಸ್ತಕದ ಬದಲು ಮಕ್ಕಳಿಗೆ ಮೊಬೈಲ್ ಕೊಟ್ಟವರ್ಯಾರು
ನಾವಲ್ಲವೇ

**- ಸಂಜಯ್ ಹೆತ್ತೂರು**

# ಕೋರೆಗಾಂವ್ ವಿಜಯೋತ್ಸವಕ್ಕೆ ಬೆಂಬಲ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಆಲೂರು : ತಾಲೂಕು ಕೋರೆಂಗಾವ್ ವಿಜಯೋತ್ಸವ ಸಮಿತಿ ಮತ್ತು ದಲಿತ ಪರ ಸಂಘಟನೆಗಳ ಒಕ್ಕೂಟದಿಂದ ಜ.7 ರಂದು ನಡೆಯಲಿರುವ 208ನೇ ಭೀಮ ಕೋರೆಂಗಾವ್ ವಿಜಯೋತ್ಸವಕ್ಕೆ ನಳಂದ ಸಹಕಾರ ಸಂಘ ಹಾಗೂ ನಳಂದ ಬುದ್ಧ ವಿಹಾರ ಚಾರಿಟಬಲ್ ಟ್ರಸ್ಟ್ ಸಂಪೂರ್ಣ ಸಹಕಾರ ನೀಡಲಿದೆ ಎಂದು ನಳಂದ ಬುದ್ಧ ವಿಹಾರ ಟ್ರಸ್ಟ್ ಅಧ್ಯಕ್ಷ ಹಾಗೂ ಸಾಹಿತಿ ಕೆ.ಬಿ.ಗುರುಮೂರ್ತಿ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿಂದು ಮಾತನಾಡಿದ ಅವರು, ಈ ವಿಜಯೋತ್ಸವ ಕಾರ್ಯಕ್ರಮಕ್ಕೆ ನಳಂದ ಬುದ್ಧ ವಿಹಾರ ಟ್ರಸ್ಟ್ ಹಾಗೂ ನಳಂದ ಸಹಕಾರ ಸಂಘ ಬೆಂಬಲ ಹಾಗೂ ಸಹಕಾರ ನೀಡುತ್ತಿರುವುದಾಗಿ ತಿಳಿಸಿದರು.

ದಲಿತರು ಸ್ವಾಭಿಮಾನಿಯಾಗಿ ಬದುಕಲು ಹಾಗೂ ಶಿಕ್ಷಣದಿಂದ ವಂಚಿತರಾಗದಂತೆ 1818 ರಲ್ಲಿ ಸಮಾನತೆಗಾಗಿ ಪೇಶ್ವೆಯರ ನಡುವೆ ಯುದ್ಧ ನಡೆಯಿತು. ದಲಿತ ಸೈನಿಕ ಸಿದ್ದನಾಕ ನೇತೃತ್ವದಲ್ಲಿ ಭೀಮಾ ನದಿ ತೀರದಲ್ಲಿ 28 ಸಾವಿರ ಪೇಶ್ವೆಯರು ಹಾಗೂ 500 ಜನ ದಲಿತ ಯೋಧರ ಮಧ್ಯೆ ನಡೆದ ಯುದ್ಧದಲ್ಲಿ, ದಲಿತ ವೀರ ಯೋಧರು ಜಯಶಾಲಿಯಾದರು. ಯುದ್ಧದಲ್ಲಿ ಮಡಿದ 22 ಜನ ದಲಿತ ಸೈನಿಕರ ಗೌರವಾರ್ಥವಾಗಿ ವಿಜಯಸ್ತಂಬ ಸ್ಥಾಪಿಸಿ ವಿಜಯೋತ್ಸವ ಆಚರಿಸಲಾಯಿತು. ಅಂದಿನಿಂದ ಇಲ್ಲಿಯವರೆಗೆ ಪ್ರತಿ ವರ್ಷ ಜ 1 ರಂದು ಭೀಮ ಕೋರೆಗಾಂವ್ ವಿಜಯೋತ್ಸವ ಆಚರಿಸಲಾಗುತ್ತಿದೆ ಎಂದರು.





ಕಾರ್ಯಕ್ರಮವನ್ನು ಶಾಸಕ ಸಿಮೆಂಟ್ ಮಂಜುನಾಥ್ ಉದ್ಘಾಟಿಸುವರು, ಮಾಜಿ ಶಾಸಕ ಎಚ್.ಕೆ ಕುಮಾರಸ್ವಾಮಿ, ರಾಜ್ಯ ಪ್ರಜಾ ಪರಿವರ್ತನ ವೇದಿಕೆ ಅಧ್ಯಕ್ಷ ಬಿ.ಗೋಪಾಲ್ ಮುಖ್ಯ ಭಾಷಣ ಮಾಡಲಿದ್ದು, ಮುಖ್ಯ ಅತಿಥಿಗಳಾಗಿ ಮಾಜಿ ಶಾಸಕ ಡಿ.ಮಲ್ಲೇಶ್, ಕಾಂಗ್ರೆಸ್ ಮುಖಂಡ ಮುರಳಿ ಮೋಹನ್ ಸೇರಿದಂತೆ ಇತರ ದಲಿತ ನಾಯಕರು ಪಾಲ್ಗೊಳ್ಳಲ್ಲಿದ್ದಾರೆ. ತಾಲೂಕಿನ ಎಲ್ಲಾ ಪ್ರಗತಿಪರ ಸಂಘಟನೆಗಳು ಕೈ ಜೋಡಿಸುವಂತೆ ಮನವಿ ಮಾಡಿದರು.

ಈ ವೇಳೆ ನಳಂದ ಬುದ್ಧ ವಿಹಾರ ಟ್ರಸ್ಟ್ ಕಾರ್ಯದರ್ಶಿ ಎ.ಟಿ ಮಂಜುನಾಥ್, ನಳಂದ ಸಹಕಾರ ಸಂಘದ ಅಧ್ಯಕ್ಷ ಹರಿಂದ್ರ ಮಾತನಾಡಿ, ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ನಳಂದ ಬುದ್ಧ ವಿಹಾರ ಟ್ರಸ್ಟ್ ಉಪಾಧ್ಯಕ್ಷ ಜವರಪ್ಪ, ಗೌರವ ಸದಸ್ಯ ನಿರ್ವಾಣಯ್ಯ, ನಿರ್ದೇಶಕ ರಾಜಯ್ಯ ಇದ್ದರು.

# ವೆಂಕಟೇಶ್‌ಗೆ ಪಿತೃ ವಿಯೋಗ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಹಾಸನ: ಹಿರಿಯ ಪತ್ರಕರ್ತ ಎ.ಆರ್.ವೆಂಕಟೇಶ್ ಅವರ ತಂದೆ ರಂಗೇಗೌಡ(86) ಶನಿವಾರ ಬೆಳಗ್ಗೆ ನಿಧನರಾದರು.

ಕಂದಾಯ ಇಲಾಖೆಯಲ್ಲಿ ಗ್ರಾಮ ಲೆಕ್ಕಾಧಿಕಾರಿಯಾಗಿ ಮತ್ತು ಮಂಡಲ ಪಂಚಾಯಿತಿ ಕಾರ್ಯದರ್ಶಿಯಾಗಿಯೂ ಮೃತರು ಸುದೀರ್ಘ ಸೇವೆ ಸಲ್ಲಿಸಿದ ಅವರು, ನಿವೃತ್ತಿ ಬಳಿಕ ತಮ್ಮ ಸ್ವಗ್ರಾಮ ಸಾಲಗಾಮೆ ಬಳಿಯ ಆಲದಹಳ್ಳಿ ಸಮೀಪದ ಎಂಸಿಎಫ್ ಪಕ್ಕದ ಗೋವಿಂದಪುರದಲ್ಲಿ ನೆಲೆಸಿದ್ದರು.

ರಂಗೇಗೌಡರು ವೆಂಕಟೇಶ್, ಸಿಐಟಿಯು ಜಿಲ್ಲಾಧ್ಯಕ್ಷ ಧರ್ಮೇಶ್ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಮಧ್ಯಾಹ್ನ ನಂತರ ಗೋವಿಂದಪುರದ ಅವರ ಜಮೀನಿನಲ್ಲಿ ನೆರವೇರಿತು.

ರಂಗೇಗೌಡರ ನಿಧನಕ್ಕೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಟಿ.ವಿ.ಶಿವಾನಂದ ತಗಡೂರು, ಉಪಾಧ್ಯಕ್ಷ ಹೆಚ್.ಬಿ.ಮದನಗೌಡ, ಹಾಸನ ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಜೆ.ಆರ್.ಕೆಂಚೇಗೌಡ ಹಾಗೂ ಎಲ್ಲ ಪದಾಧಿಕಾರಿಗಳು ತೀವ್ರ ಸಂತಾಪ ವ್ಯಕ್ತಪಡಿಸಿ, ಮೃತರ ಆತ್ಮಕ್ಕೆ ಶಾಂತಿ ಕೋರಿದ್ದಾರೆ.

ಕನ್ನಡ ಪೋಸ್ಟ್

E-mail : kannadapostnews@gmail.com facebook.com / ಕನ್ನಡ post



# ಆಲೂಗಡ್ಡೆ: ಅಂಗಾಂಶ ಕೃಷಿಗೆ ಆದ್ಯತೆ ನೀಡಿದರೆ ಅನುಕೂಲ

## ವಿಜ್ಞಾನಿ ಅಮರನಂಜುಂಡೇಶ್ವರ ಪ್ರತಿಪಾದನೆ | ಒಂದು ದಿನದ ಕಾರ್ಯಾಗಾರ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಜಿಲ್ಲೆಯ ಪ್ರಮುಖ ವಾಣಿಜ್ಯ ಬೆಳೆ ಆಲೂಗಡ್ಡೆ ಲಾಭದಾಯಕ ಬೆಳೆಯಾಗಬೇಕೆಂದರೆ ಸ್ಥಳೀಯವಾಗಿ ಬೀಜೋತ್ಪಾದನೆ ಕೈಗೊಳ್ಳಬೇಕು. ಅಂಗಾಂಶ ಕೃಷಿ ಕುಡಿ ಕಾಂಡ ತಂತ್ರಜ್ಞಾನ ಅಳವಡಿಸಿಕೊಂಡರೆ ಲಾಭ ಪಡೆಯಬಹುದೇ ಹೊರತು ಬೇರೆ ವಿಧಾನಗಳಿಂದ ಯಾವ ಪ್ರಯೋಜನವಿಲ್ಲವೆಂದು ಬೆಂಗಳೂರು ತೋಟಗಾರಿಕೆ ಮಹಾವಿದ್ಯಾಲಯದ ಪ್ರೊ. ಡಾ. ಹೆಚ್.ಅಮರನಂಜುಂಡೇಶ್ವರ ಹೇಳಿದರು.

ನಗರದ ತಾಲ್ಲೂಕು ಪಂಚಾಯಿತಿ ಸಂಭಾಂಗಣದಲ್ಲಿ ಶುಕ್ರವಾರ ತೋಟಗಾರಿಕೆ ಇಲಾಖೆ, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬಾಗಲಕೋಟೆ ವತಿಯಿಂದ ಹಮ್ಮಿಕೊಂಡಿದ್ದ ಸುಸ್ಥಿರ ಹಾಗು ಗುಣಮಟ್ಟದ ಆಲೂಗಡ್ಡೆ ಬೀಜೋತ್ಪಾದನಾ ಕ್ರಮಗಳು ಹಾಗೂ ಕಾನೂನು ಕುರಿತು ಒಂದು ದಿನದ ಕಾರ್ಯಾಗಾರದಲ್ಲಿ ಉಪನ್ಯಾಸ ನೀಡಿದರು.

ಆಲೂಗಡ್ಡೆ ಬೆಳೆಗೆ 100 ವರ್ಷಗಳ ಇತಿಹಾಸವಿದೆ. 1960ರ ದಶಕದಲ್ಲಿ ಜಿಲ್ಲೆಯ ಪ್ರಮುಖ ವಾಣಿಜ್ಯ ಬೆಳೆಯಾಗಿ ಖ್ಯಾತಿ ಪಡೆದಿತ್ತು. 50 ಸಾವಿರ ಹೆಕ್ಟೇರ್‌ನಿಂದ ಪ್ರಸ್ತುತ 5 ಸಾವಿರ ಹೆಕ್ಟೇರ್‌ಗೆ ಬಿತ್ತನೆ ಪ್ರದೇಶ ಕುಸಿತ ಕಂಡಿದ್ದು ರೈತರು ಬೆಳೆಯಲ್ಲಿ ಬದಲಾವಣೆ ಮಾಡಿಕೊಂಡಿರುವುದು ಏಕೆ ಎಂಬ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವ ಅನಿವಾರ್ಯತೆ ಈಗ ಸೃಷ್ಟಿಯಾಗಿದೆ ಎಂದರು.

ಆಲೂಗಡ್ಡೆ ಬಿತ್ತನೆಗೆ ಹಾಸನ ಜಿಲ್ಲೆಯ ವಾತಾವರಣ ಪೂರಕವಾಗಿದೆ. ಮೌಲ್ಯವರ್ಧನೆಗೆ ಸೂಕ್ತ ತಳಿ ಅವಶ್ಯವಾಗಿದೆ. ಸ್ಥಳೀಯವಾಗಿಯೇ ಬೀಜೋತ್ಪಾದನೆ ಮಾಡಿ ಬಿಹಾರದ ಜಲಂಧರ್‌ನ ಬಿತ್ತನೆ ಆಲೂಗಡ್ಡೆ ಖರೀದಿಸುವ ಪ್ರಕ್ರಿಯೆಗೆ ಕೊನೆ




ಹಾಡಬೇಕು. ಆ ಮೂಲಕ ರೈತರಿಗೆ ನೆರವಾಗಬೇಕೆಂದು 2018ರಿಂದ 2023ರ ವರೆಗೆ ಸೋಮನಹಳ್ಳಿ ತೋಟಗಾರಿಕೆ ಸಂಶೋಧನಾ ಹಾಗು ವಿಸ್ತರಣಾ ಕೇಂದ್ರದಲ್ಲಿ ವಿಜ್ಞಾನಿಗಳೆಲ್ಲ ಸೇರಿ ಯೋಜನೆ ರೂಪಿಸಿದರೂ ಫಲಪ್ರದವಾಗಲಿಲ್ಲ. ಶೇ. 20 ರಷ್ಟು ರೈತರು ಅಂಗಾಂಶ ಕೃಷಿ ಕುಡಿ ಕಾಂಡ ವ್ಯವಸ್ಥೆಯನ್ನು ಅಳವಡಿಸಿಕೊಂಡಿದ್ದರೆ ಫಲಿತಾಂಶ ಬೇರೆಯೇ ಆಗಿರುತ್ತಿತ್ತೆಂದರು.

ಜಲಂಧರ್‌ನಿಂದ ತರಿಸಿಕೊಳ್ಳುತ್ತಿರುವ ಬಿತ್ತನೆ ಆಲೂಗಡ್ಡೆ ಅಂದಾಜು 8ನೇ ವರ್ಷದ ಬೆಳೆಯಾಗಿರುತ್ತದೆ. ಅದರಲ್ಲಿ ರೋಗ ನಿರೋಧಕ ಶಕ್ತಿ ಕಡಿಮೆಯಾಗಿರುವ ಪರಿಣಾಮ ಇಲ್ಲಿನ ವಾತಾವರಣಕ್ಕೆ ಹೊಂದಿಕೊಳ್ಳದೆ ಬಹುಬೇಗನೆ ನಾಶವಾಗುತ್ತದೆ. ಶೀಘ್ರ ಸಂತಾನ ಗಡ್ಡೆಗಳನ್ನು ಬಳಸುವುದರಿಂದ ಇಳುವರಿ ಹಾಗು ಗುಣಮಟ್ಟವನ್ನು ಹೆಚ್ಚಾಗಿ ನಿರೀಕ್ಷಿಸಬಹುದು. ಆದರೆ ಬಹುಕಾಲದಿಂದ ಜಿಲ್ಲೆಯ ರೈತರು ಹಾಗೂ ವರ್ತಕರು ಕುಫ್ರಿ ಜ್ಯೋತಿ, ಹಿಮಾಲಿನಿ ತಳಿಗಳನ್ನೇ ಅವಲಂಬಿಸಿದ್ದಾರೆ. ಇತ್ತೀಚೆಗೆ ಕುಫ್ರಿ ಉದಯ ಮತ್ತು ಕರಣ್ ತಳಿ ಪುಚಲಿತದಲ್ಲಿದೆ. ಜಲಂಧರ್‌ನಿಂದ ಯಾವ ತಳಿಯ ಆಲೂಗಡ್ಡೆ ತರುತ್ತೆವೋ ಅದನ್ನೇ ಬೆಳೆಯಬೇಕೆಂಬ ಅಲಿಖಿತ ನಿಯಮ ಜಾರಿಯಲ್ಲಿದೆ. ಅದರ ಹೊರತಾಗಿ ಬೀಜೋತ್ಪಾದನೆ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಜಿಲ್ಲೆಯ ರೈತರು ಲಾಭದಾಯಕ ದಾರಿ ಕಂಡುಕೊಳ್ಳಬೇಕೆಂದರು.

### ಜಲಂಧರ್‌ಗೆ ಪ್ರಾಮುಖ್ಯತೆ ಏಕೆ

ಆಲೂಗಡ್ಡೆ ಬೀಜೋತ್ಪಾದನೆಗೆ ದಕ್ಷಿಣ ಭಾರತಕ್ಕಿಂತ ಉತ್ತರ ಭಾರತದ ವಾತಾವರಣ ಹೊಂದಾಣಿಕೆಯಾಗುತ್ತದೆಂದು 1950ರಲ್ಲಿ ಕೃಷಿ ವಿಜ್ಞಾನಿ ಡಾ. ಪುಷ್ಕರನಾಥ್ ಅವರು ಸಂಶೋಧನೆ ಮೂಲಕ ಸಾಬೀತುಪಡಿಸಿದ್ದರು. ಆದರೆ 4ನೇ ಸಂತತಿ ಬಳಿಕ ಬಿತ್ತನೆಗೆ ಆಲೂಗಡ್ಡೆಯನ್ನು ಬಿತ್ತನೆಗೆ ನೀಡಬಾರದೆಂದು ಅವರು ಹೇಳಿದ್ದರು. ಆದರೆ ಇಂದಿಗೂ ಅಲ್ಲಿಂದಲೇ ಬಿತ್ತನೆ ಆಲೂಗಡ್ಡೆ ಪೂರೈಕೆಯಾಗುತ್ತಿದ್ದು ರೋಗ ನಿರೋಧಕ ಶಕ್ತಿಯನ್ನು ಕಳೆದುಕೊಂಡಿದೆ ಎಂದರು.

ಕೇಂದ್ರಿಯ ಆಲೂಗಡ್ಡೆ ಸಂಶೋಧನಾ ಕೇಂದ್ರ (ಸಿಪಿಆರ್)ನಿಂದ ಪ್ರತಿ ಗಡ್ಡೆಗೆ 8 ರೂ. ಕೊಟ್ಟು ಬೀಜೋತ್ಪಾದನೆ ಮಾಡುವ ಅಲ್ಲಿನ ರೈತರು 8 ವರ್ಷ ಅದು ಒಂದರಿಂದಲೇ ಬೀಜಗಳ ಉತ್ಪಾದಿಸುತ್ತಾರೆ. ವರ್ಷದಿಂದ ವರ್ಷಕ್ಕೆ ಅವರು ಲಾಭ ಮಾಡಿಕೊಳ್ಳುತ್ತಾರೆ. ಅದರಿಂದ ನಾವು ಪಾಠ ಕಲಿಯುತ್ತಿಲ್ಲ. ಆಲೂಗಡ್ಡೆ ಲಾಭದಾಯಕ ಬೆಳೆಯಾಗಬೇಕೆಂದರೆ ಎಕರೆಗೆ 80 ಕ್ವಿಂಟಾಲ್ ಇಳುವರಿ ಪಡೆಯಬೇಕು. ಅದು ಸಾಧ್ಯವಾಗಬೇಕಾದರೆ ಅಂಗಾಂಶ ಕೃಷಿ ಕುಡಿ ಕಾಂಡ ವ್ಯವಸ್ಥೆ ಅಳವಡಿಸಿಕೊಳ್ಳಬೇಕೆಂದು ಪ್ರತಿಪಾದಿಸಿದರು. ವಿಜ್ಞಾನಿ ಡಾ. ಪ್ರವೀಣ್ ಪಟ್ಟೇದ್ ಅವರು ಆನ್‌ಲೈನ್ ಮೂಲಕ ರೈತರಿಗೆ ಮಾಹಿತಿ ನೀಡಿದರು.

# ಜಗತ್ತು ಕಂಡ ಶ್ರೇಷ್ಠ ಶಿಲ್ಪಿ ಜಕಣಾಚಾರಿ: ಕೆಎಂಶಿ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಸೀಕೆರೆ: ಜಗತ್ತು ಕಂಡ ಮಹಾನ್ ಶಿಲ್ಪಿ ಅಮರಶಿಲ್ಪಿ ಜಕಣಾಚಾರಿ ಎಂದು ಶಾಸಕ ಕೆ.ಎಂ. ಶಿವಲಿಂಗೇಗೌಡ ಹೇಳಿದರು.

ತಾಲ್ಲೂಕು ಆಡಳಿತ ಹಾಗೂ ವಿಶ್ವಕರ್ಮ ಸಮಾಜದಿಂದ ನಗರದ ವಿಶ್ವಕರ್ಮ ಸಮುದಾಯ ಭವನದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಮಾತನಾಡಿ, ಬೇಲೂರು-ಹಳೇಬೀಡು ವಿಶ್ವ ಭೂಪಟದಲ್ಲಿ ಮಿನುಗುತ್ತಿರುವುದಕ್ಕೆ ಕಾರಣ ಮಹಾನ್ ಶಿಲ್ಪಿ ಜಕಣಾಚಾರಿ ಎಂದರು.

ನಿರ್ಮಾಣ ಹಂತದಲ್ಲಿರುವ ವಿಶ್ವಕರ್ಮ ಸಮುದಾಯ ಭವನದ ಕಾಮಗಾರಿಯನ್ನು ಚುರುಕುಗೊಳಿಸಲು ಹೆಚ್ಚುವರಿಯಾಗಿ 10 ಲಕ್ಷ ರೂ. ಅನುದಾನ ನೀಡುವುದಾಗಿ ಭರವಸೆ ನೀಡಿದರು.

ತಹಶೀಲ್ದಾರ್ ಸಂತೋಷ್ ಕುಮಾರ್ ಮಾತನಾಡಿ, ಅಮರಶಿಲ್ಪಿ ಜಕಣಾಚಾರಿ ಅವರಿಂದ ನಿರ್ಮಿಸಲ್ಪಟ್ಟ ಬೇಲೂರು-ಹಳೇಬೀಡಿನ ಹೊಯ್ಸಳರ ಕಾಲದ ಶಿಲ್ಪಕಲೆ ಅಂತಾರಾಷ್ಟ್ರೀಯ ಮನ್ನಣೆಗೆ ಪಾತ್ರವಾಗಿದೆ ಎಂದರು.

ದೇಶ ವಿದೇಶದಿಂದ ಬರುವ ಪ್ರವಾಸಿಗರು ಈ ಶಿಲ್ಪಕಲೆಯ ಸೊಬಗಿಗೆ ಬೆರಗಾಗುತ್ತಿರುವುದೇ ಜಕಣಾಚಾರಿ ಅವರ ಕಲೆಗೆ ಸಾಕ್ಷಿ. ದೈಹಿಕವಾಗಿ ಅವರು ನಮ್ಮೊಂದಿಗೆ ಈ ಮಹಾನ್ ಶಿಲ್ಪಿ ಇಲ್ಲದೆ ಇದ್ದರೂ ಅವರ ಈ ಕೆತ್ತನೆಯ ಮೂಲಕ ನಮ್ಮೊಟ್ಟಿಗೆ ಇಂದಿಗೂ ಜೀವಂತವಾಗಿ ಇದ್ದಾರೆ ಎಂದರು.

# ಸಕಲೇಶಪುರದಲ್ಲಿ ಡ್ರಗ್ಸ್ ವಿರುದ್ಧ ಜಾಗೃತಿ ಅಭಿಯಾನ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಪಟ್ಟಣದ ಸರ್ಕಾರಿ ಮಾಧ್ಯಮಿಕ ಶಾಲಾ ಆವರಣದಲ್ಲಿ ಹಿಂದು ಜಾಗರಣ ವೇದಿಕೆ ವತಿಯಿಂದ ಡ್ರಗ್ಸ್ ವಿರುದ್ಧ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಮೈಸೂರಿನಿಂದ ಚಾಲನೆಗೊಂಡು ಮಂಗಳೂರು ಹಾಗೂ ಚಿಕ್ಕಮಗಳೂರು ಜಿಲ್ಲೆಗಳ ವಿವಿಧ ಭಾಗಗಳಲ್ಲಿ ಜಾಗೃತಿ ಮೂಡಿಸಿ ಜಿಲ್ಲೆಗೆ ಆಗಮಿಸಿದ ಡ್ರಗ್ ಮುಕ್ತ ಭಾರತ ಆಂದೋಲನದ ರಥಕ್ಕೆ ಘೋಷಣೆಗಳೊಂದಿಗೆ ಭರ್ಜರಿ ಸ್ವಾಗತ ಕೋರಲಾಯಿತು.

ಶಾಸಕ ಸಿಮೆಂಟ್ ಮಂಜು ಮಾತನಾಡಿ, ಡ್ರಗ್ಸ್ ಕೇವಲ ವ್ಯಕ್ತಿಯನ್ನಷ್ಟೇ ಅಲ್ಲ. ಕುಟುಂಬ, ಸಮಾಜ ಹಾಗೂ ದೇಶವನ್ನೇ ನಾಶ ಮಾಡುವ ಮರಣ ವ್ಯಾಪಾರ. ಯುವ ಜನತೆ ಕೈಯಲ್ಲಿ ಪುಸ್ತಕದ ಬದಲು ಮಾದಕ ವಸ್ತು ಕಾಣಿಸಿಕೊಳ್ಳುತ್ತಿರುವುದು ಅತ್ಯಂತ ಭಯಾನಕ ಬೆಳವಣಿಗೆ. ರಾಜಕೀಯ, ಜಾತಿ, ಧರ್ಮದ ಬೇಧವಿಲ್ಲದೆ ಸಮಾಜ ಒಟ್ಟಾಗಿ ಇದರ ವಿರುದ್ಧ ಹೋರಾಡಬೇಕು ಎಂದು ಎಚ್ಚರಿಕೆ ನೀಡಿದರು.

ಮಾಜಿ ಶಾಸಕ ಎಚ್.ಎಂ. ವಿಶ್ವನಾಥ್ ಮಾತನಾಡಿ, ಡ್ರಗ್ಸ್ ವ್ಯಸನ ನಿಶಬ್ದವಾಗಿ ದೇಶದ ಭವಿಷ್ಯವನ್ನು ಕೊಲ್ಲುತ್ತಿದೆ. ಸರ್ಕಾರ ಮಾತ್ರವಲ್ಲ, ಪೋಷಕರು, ಶಿಕ್ಷಕರು ಹಾಗೂ ಸಮಾಜ ಎಲ್ಲರೂ ತಮ್ಮ ಹೊಣೆಗಾರಿಕೆಯನ್ನು ಅರಿತುಕೊಳ್ಳದಿದ್ದರೆ ಮುಂದಿನ ಪೀಳಿಗೆ ಅಂಧಕಾರದಲ್ಲಿ ಮುಳುಗುತ್ತದೆ ಎಂದು ಹೇಳಿದರು.

ಜಾಗೃತಿ ಜಾಥದ ಸಂಚಾಲಕ ಸಂದೇಶ್ ಮಂಡ್ಯ ಮಾತನಾಡಿ, ಡ್ರಗ್ ವಿರುದ್ಧದ ಹೋರಾಟ ಒಂದು ದಿನದ ಕಾರ್ಯಕ್ರಮವಲ್ಲ. ಇದು ನಿರಂತರ ಸಾಮಾಜಿಕ ಯುದ್ಧ. ಪ್ರತಿಯೊಬ್ಬ ನಾಗರಿಕ ಜಾಗೃತನಾದಾಗ ಮಾತ್ರ ಡ್ರಗ್ಸ್ ಮುಕ್ತ ಭಾರತ ಎಂಬ ಕನಸು ನನಸಾಗುತ್ತದೆ ಎಂದರು.

ಆರೋಗ್ಯ ಇಲಾಖೆಯ ಅಧಿಕಾರಿ ಯಾಸ್ಮಿನ್ ಮಾತನಾಡಿ, ಡ್ರಗ್ಸ್ ದೇಹ, ಮನಸ್ಸು ಹಾಗೂ ಜೀವನವನ್ನೇ ಕುಸಿಯುವಂತೆ ಮಾಡುತ್ತದೆ. ಚಿಕಿತ್ಸೆಗಿಂತ ಮುನ್ನೆಚ್ಚರಿಕೆಯೇ ಮುಖ್ಯ. ಯುವಕರು ತಪ್ಪು ದಾರಿಗೆ ಹೋಗದಂತೆ ಕುಟುಂಬ ಮತ್ತು ಸಮಾಜ ಎಚ್ಚರಿಕೆಯಿಂದಿರಬೇಕು ಎಂದು ಸಲಹೆ ನೀಡಿದರು.

ಪಟ್ಟಣದ ಹಿರಿಯ ಸರ್ಕಾರಿ ಪ್ರಾಥಮಿಕ ಶಾಲೆಯಿಂದ ಆರಂಭವಾದ ಜಾಗೃತಿ ಜಾಥವು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಸಾರ್ವಜನಿಕರಲ್ಲಿ ಡ್ರಗ್ಸ್ ವಿರುದ್ಧ ಜಾಗೃತಿ ಮೂಡಿಸಿತು.

ಈ ಸಂದರ್ಭದಲ್ಲಿ ಹಿಂದು ಜಾಗರಣ ವೇದಿಕೆ ಅಧ್ಯಕ್ಷ ಮಂಜುನಾಥ್ ಸಂಘಿ, ಬಿಜೆಪಿ ತಾಲೂಕು ಮಂಡಲ ಅಧ್ಯಕ್ಷ ಅಶ್ವಥ್ ವಳಲಹಳ್ಳಿ, ವಿಶ್ವ ಹಿಂದು ಪರಿಷತ್‌ನ ಹರೀಶ್ ಕರಡಿಗಾಲ, ಪತ್ರಕರ್ತರ ಸಂಘದ ಅಧ್ಯಕ್ಷ ಜೈ ಭೀಮ್ ಮಂಜು, ಸತ್ಯನಾರಾಯಣ ಗುಪ್ತ, ಬಾಲು ಕೊಲ್ಲಹಳ್ಳಿ, ಸಂದೀಪ್ ರಘು, ಹರೀಶ್ ಉಪಸ್ಥಿತರಿದ್ದರು.

# ಬೇಲೂರಿನಲ್ಲಿ ಸಂಭ್ರಮದ ಅಯ್ಯಪ್ಪಸ್ವಾಮಿ ಉತ್ಸವ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೇಲೂರು: 8ನೇ ವರ್ಷದ ವಾರ್ಷಿಕ ಪೂಜೆ ಅಂಗವಾಗಿ ಪಟ್ಟಣದ ಯಗಚಿ ನದಿ ದಡದಲ್ಲಿರುವ ಶ್ರೀ ಅಯಪ್ಪ ಸ್ವಾಮಿ ದೇಗುಲದಲ್ಲಿ ಶ್ರದ್ಧಾ ಭಕ್ತಿಯಿಂದ ತಿರುವಾಭರಣ ಉತ್ಸವವನ್ನು ವಿಜೃಂಭಣೆಯಿಂದ ನಡೆಸಲಾಯಿತು.

ಈ ಹಿನ್ನೆಲೆಯಲ್ಲಿ ಶ್ರೀ ಶಾಸ್ತನಿಗೆ ಅರ್ಪಿಸಲಾದ ತಿರುವಾಭರಣವನ್ನು ಪಟ್ಟಣದ ಶ್ರೀ ಚನ್ನಕೇಶವ ಸ್ವಾಮಿ ದೇಗುಲದಿಂದ ವಿಶೇಷ ಪೂಜೆಯೊಂದಿಗೆ ಹೊರತಂದು, ವಿವಿಧ ಕಲಾ ತಂಡಗಳೊಂದಿಗೆ ಭಕ್ತಿಭಾವಪೂರ್ಣ ಮೆರವಣಿಗೆಯಲ್ಲಿ ಐಯಪ್ಪ ಸ್ವಾಮಿ ದೇಗುಲಕ್ಕೆ ತರಲಾಯಿತು.

ಮೆರವಣಿಗೆಯು ಚನ್ನಕೇಶವ ಸ್ವಾಮಿ ದೇಗುಲದಿಂದ ಪ್ರಾರಂಭವಾಗಿ ರಸ್ತೆಯುದ್ದಕ್ಕೂ ಐಯಪ್ಪಸ್ವಾಮಿ ಭಜನೆ, ಶರಣಘೋಷಣೆಗಳು ಮೊಳಗುತ್ತಾ ಸಾಗಿದವು.

ಭಕ್ತರು ಸ್ವಾಮಿ ಶರಣಂ ಅಯಪ್ಪ ಎಂಬ ನಾಮಸ್ಮರಣೆಯೊಂದಿಗೆ ತಿರುವಾಭರಣಕ್ಕೆ ಪೂಜೆ ಸಲ್ಲಿಸುತ್ತಾ ಮೆರವಣಿಗೆಯಲ್ಲಿ ಭಾಗವಹಿಸಿದರು. ವಿವಿಧ ವಾದ್ಯ ಮೇಳ ಹಾಗೂ ಕಲಾ ತಂಡಗಳ ಪ್ರದರ್ಶನ ಮೆರವಣಿಗೆಗೆ ವಿಶೇಷ



ಮೆರುಗು ನೀಡಿತು.

ಟ್ರಸ್ಟ್ ಅಧ್ಯಕ್ಷ ವೈ.ಎನ್.ಕೃಷ್ಣೇಗೌಡ, ಉಪಾಧ್ಯಕ್ಷ ಬಿ.ಎಂ. ಸಂತೋಷ್, ದೇಗುಲ ಪ್ರಧಾನ ಕಾರ್ಯದರ್ಶಿ ಯಮಸಂಧಿ ಪಾಪಣ್ಣ, ಮೋಹನ್ ಕುಮಾರ್ ಉಪಸ್ಥಿತರಿದ್ದರು. ದೇವಾಲಯದ ಗುರುಸ್ವಾಮಿಗಳಾದ ದೇವಿಸ್ವಾಮಿ, ಮಂಜುನಾಥ್, ಧನಪಾಲ್, ಮಂಜುನಾಥ, ಪ್ರಕಾಶ್, ನಿವಿತ, ಮಧು ಹಾಗೂ ಪ್ರಧಾನ ಅರ್ಚಕರಾದ ಪ್ರಸನ್ನ ಭಟ್, ಪ್ರಕಾಶ್ ಭಟ್, ಸೋಮಶೇಖರ್ ವಿಧಿವಿಧಾನಗಳೊಂದಿಗೆ ಪೂಜಾ ಕಾರ್ಯಕ್ರಮ ನೆರವೇರಿಸಿದರು.

# ಆಹಾರ ಸುರಕ್ಷತಾ ಅಧಿಕಾರಿಗಳಿಂದ ಬೇಕರಿ ಪದಾರ್ಥ ಪರಿಶೀಲನೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಉಪ ವಿಭಾಗಾಧಿಕಾರಿ ಜಗದೀಶ್ ಗಂಗಣ್ಣನವರ್ ನೇತೃತ್ವದಲ್ಲಿ ಆಹಾರ ಸುರಕ್ಷತಾ ಅಧಿಕಾರಿ ಕೆ.ವಿನಯ್ ಅವರು ನಗರದ ವಿವಿಧ ಬೇಕರಿಗಳಿಗೆ ದಿಢೀರ್ ಭೇಟಿ ನೀಡಿ ಆಹಾರ ಪದಾರ್ಥಗಳ ಗುಣಮಟ್ಟ ಪರಿಶೀಲಿಸಿದರು.

ಹೊಸ ವರ್ಷಾಚರಣೆ ಹಿನ್ನಲೆಯಲ್ಲಿ ಕೇಕ್ ಮತ್ತಿತರ ಪದಾರ್ಥಗಳಿಗೆ ಹೆಚ್ಚಿನ ಬೇಡಿಕೆ ಇದ್ದರಿಂದ ಅಧಿಕ ಲಾಭದಾಸೆಗೆ ಬೇಕರಿಯಲ್ಲಿ ಗುಣಮಟ್ಟ ಕಾಯ್ದುಕೊಳ್ಳದೆ ತರಾತುರಿಯಲ್ಲಿ ಪದಾರ್ಥ ತಯಾರಿಸುವ ಸಾಧ್ಯತೆ ಹಿನ್ನಲೆಯಲ್ಲಿ ಭೇಟಿ ನೀಡಿ ಕೇಕ್ ತಯಾರಿಕಾ ವಿಧಾನ, ಸ್ವಚ್ಛತೆ ಹಾಗು ಆಹಾರ ಸುರಕ್ಷತಾ ಮಾನದಂಡಗಳ ಪಾಲನೆ ಕುರಿತು ತಪಾಸಣೆ ನಡೆಸಿದರು.

ಈ ವೇಳೆ ಬೇಕರಿ ಮಾಲೀಕರು ಮತ್ತು ಕೆಲಸಗಾರರಿಗೆ ಅಧಿಕಾರಿಗಳು



ಪೂರಕ ಸೂಚನೆ ನೀಡಿದರು. ವ್ಯಾಪಾರದ ಲಾಭಕ್ಕಿಂತ ಸಾರ್ವಜನಿಕರ ಆರೋಗ್ಯಕ್ಕೆ ಹೆಚ್ಚಿನ ಮಹತ್ವ ನೀಡಬೇಕೆಂದು ತಿಳಿಸಿದರು.

ಶುಚಿತ್ವ ಕಾಪಾಡಿಕೊಂಡು ಗುಣಮಟ್ಟದ ಆಹಾರ ಪದಾರ್ಥಗಳನ್ನು ನೀಡಿದರೆ ಗ್ರಾಹಕರು ಸ್ವಯಂ ಪ್ರೇರಿತವಾಗಿ ಬರುತ್ತಾರೆ. ಗುಣಮಟ್ಟದಲ್ಲಿ ತಾರತಮ್ಯವಿದ್ದರೆ ಗ್ರಾಹಕರು ದೂರ ಉಳಿಯುತ್ತಾರೆ ಎಂದು ಮನವರಿಕೆ ಮಾಡಿದರು.ಪ್ರತಿಯೊಂದು ಆಹಾರ ಪದಾರ್ಥದ ಮೇಲೆ ಮ್ಯಾನುಫ್ಯಾಕ್ಚರಿಂಗ್ ದಿನಾಂಕ, ಅವಧಿ ಮೀರಿದ ದಿನಾಂಕ ಹಾಗೂ ಬ್ಯಾಚ್ ನಂಬರ್ ನಮೂದಿಸುವುದು ಕಡ್ಡಾಯವಾಗಿದೆ.

ಈ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಸೂಚಿಸಲಾಯಿತು. ಜೊತೆಗೆ, ಪ್ರತಿಯೊಬ್ಬ ಆಹಾರ ಉದ್ಯಮಿ ಕಡ್ಡಾಯವಾಗಿ ಊಖಖಅಐ ಪರವಾನಗಿಯನ್ನು ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ತಪಾಸಣೆ ವೇಳೆ ವಿವಿಧ ಬೇಕರಿಗಳಿಂದ ಸಂಶಯಾಸ್ಪದವಾಗಿ ಕಂಡು ಬಂದ ಸುಮಾರು 12 ಬಗೆಯ ಕೇಕ್ ಮಾದರಿಗಳನ್ನು ಸಂಗ್ರಹಿಸಿ, ಅವುಗಳ ಗುಣಮಟ್ಟ ಪರಿಶೀಲನೆಗಾಗಿ ಪ್ರಯೋಗಾಲಯಕ್ಕೆ ಕಳುಹಿಸಲಾಯಿತು.

ಉಪ ವಿಭಾಗಾಧಿಕಾರಿ ಕಚೇರಿ ಸಿಬ್ಬಂದಿ ಹಾಗೂ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆ ಸಿಬ್ಬಂದಿ ಉಪಸ್ಥಿತರಿದ್ದರು.

# ಗಣಿಗಾರಿಕೆ ಸ್ಥಗಿತಕ್ಕೆ ಮನವಿ ಜಂಟಿ ಸಮೀಕ್ಷೆಗೆ ಡಿಸಿ ಸೂಚನೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಹೊಳೆನರಸೀಪುರ ತಾಲ್ಲೂಕಿನ ಶ್ರೀಮಠದ ಕಾವಲು ಗ್ರಾಮದ ಸರ್ವೆ ನಂ. 6ರಲ್ಲಿ ನಡೆಯುತ್ತಿರುವ ಕಲ್ಲುಪುಡಿ ಘಟಕ ಹಾಗೂ ಗಣಿಗಾರಿಕೆ ಪಾರದರ್ಶಕತೆ ಸಂಬಂಧ ಸಮಗ್ರ ತನಿಖೆ ನಡೆಸಿ ವರದಿ ಸಲ್ಲಿಸಬೇಕೆಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅಧೀನ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

15 ಎಕರೆಯಲ್ಲಿ ಗಣಿಗಾರಿಕೆಗೆ ಅನುಮತಿ ಪಡೆದು ಹೆಚ್ಚುವರಿ ಭೂಮಿ ಕಬಳಿಸಲಾಗಿದೆ. ಗಣಿಗಾರಿಕೆಯಿಂದ ಗ್ರಾಮಸ್ಥರಿಗೆ ಭಾರೀ ತೊಂದರೆಯಾಗುತ್ತಿದೆ. ಪರವಾನಗಿ ರದ್ದುಪಡಿಸಬೇಕೆಂದು ಗ್ರಾಮಸ್ಥರು ಡಿ. 29ರಂದು ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದ್ದರು.

ಈ ಸಂಬಂಧ ಉಪವಿಭಾಗಾಧಿಕಾರಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಹೊಳೆನರಸೀಪುರ ತಹಶೀಲ್ದಾರ್, ಭೂ ದಾಖಲೆಗಳ ಸಹಾಯಕ ನಿರ್ದೇಶಕರಿಗೆ ಜಿಲ್ಲಾಧಿಕಾರಿ ಪತ್ರ ಬರೆದು ಜಂಟಿ ಸಮೀಕ್ಷೆ ಮೂಲಕ ಛಾಯಾಚಿತ್ರ ಸಮೇತ ವರದಿ ಸಲ್ಲಿಸಲು ನಿರ್ದೇಶನ ನೀಡಿದ್ದಾರೆ.

## ಇತಿಹಾಸದಲ್ಲಿ ಈ ದಿನ

### ಜನವರಿ-04

2007: ಅಮೆರಿಕದ ಪ್ರತಿನಿಧಿ ಸಭೆಯ ಮೊದಲ ಮಹಿಳಾ ಸ್ಪೀಕರ್ ಆಗಿ ನ್ಯಾನ್ಸಿ ಪೆಲೋಸಿ ಅಧಿಕಾರ ಸ್ವೀಕಾರ

**ಜನನ**

1643: ಮಹಾನ್ ವಿಜ್ಞಾನಿ ಸರ್ ಐಸಾಕ್ ನ್ಯೂಟನ್, ಆಧುನಿಕ ಭೌತಶಾಸ್ತ್ರ ಪಿತಾಮಹ

1809: ಲೂಯಿ ಬ್ರೈಲ್, ಬ್ರೈಲ್ ಲಿಪಿಯ ಆವಿಷ್ಕಾರಕ

**ನಿಧನ**

1960 ಫ್ರೆಂಚ್ ತತ್ವಜ್ಞಾನಿ ಹಾಗೂ ಸಾಹಿತ್ಯನೋಬೆಲ್ ಪುರಸ್ಕೃತ ಅಲ್ಬೆರ್ ಕಾಮು

# ಅಕ್ಷರ ಮಾತೆ ಸಾವಿತ್ರಿಬಾಯಿ ಫುಲೆ ದೇಶದ ಮೊದಲ ಮಹಿಳಾ ಶಿಕ್ಷಕಿ

**ಕೆ.ಎನ್. ಚಿದಾನಂದ, ಹಾಸನ**

21ನೇ ಶತಮಾನದಲ್ಲಿ ಸಾಕ್ಷರತೆಯು ಹೆಮ್ಮರವಾಗಿ ಬೇರು ಬಿಡಲು 19ನೇ ಶತಮಾನದಲ್ಲಿ ಸಾಕ್ಷರತೆಯ ಬೆಳವಣಿಗೆಗಾಗಿ ಅಕ್ಷರಶಃ ಕಾದಾಡಿದ ವೀರಾಗ್ರಣಿಗಳನ್ನು ಸ್ಮರಿಸುವುದು ನಾವು ಅವರಿಗೆ ನೀಡುವ ಗೌರವವೇ ಸರಿ. 19ನೇ ಶತಮಾನದ ಕಾಲಘಟ್ಟದಲ್ಲಿ ಶೈಕ್ಷಣಿಕ ಕ್ರಾಂತಿಯನ್ನೇ ಉಂಟು ಮಾಡಿದ ಅಕ್ಷರದವ್ವ ಸಾವಿತ್ರಿಬಾಯಿ ಫುಲೆಯವರನ್ನು ಸದಾ ಸ್ಮರಿಸಬೇಕು. ಏಕೆಂದರೆ ಅಂದು ಮಹಿಳೆಯ ಸ್ಥಾನ ಮನೆಯ ಅಡುಗೆ ಕೋಣೆಗೆ ಸೀಮಿತವಾಗಿತ್ತು. ಸಾವಿತ್ರಿಬಾಯಿ ಫುಲೆಯವರ ಹೋರಾಟದ ಫಲವಾಗಿ ಮಹಿಳೆ ಮನೆಯಿಂದ ಹೊರಬಂದು ಶಿಕ್ಷಣ ಪಡೆದು ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಸ್ವತಂತ್ರವಾಗಿ ಸ್ವಾವಲಂಬಿಯಾಗಿ ಜೀವನ ಸಾಗಿಸಲು ಅವಕಾಶ ಸಿಕ್ಕಿದೆ. ಅಂದಮೇಲೆ ಅಂತಹ ಮಹಾ ಮಹಿಳೆ ಅಕ್ಷರ ಮಾತೆ ಸಾವಿತ್ರಿಬಾಯಿ ಫುಲೆಯವರ ಬಗ್ಗೆ ತಿಳಿಯೋಣ ಬನ್ನಿ.

ಕ್ರಾಂತಿ ಜ್ಯೋತಿ ಅಕ್ಷರದವ್ವ ಸಾವಿತ್ರಿಬಾಯಿ ಫುಲೆಯವರು ಸ್ವಾತಂತ್ರ್ಯ ಪೂರ್ವ ಭಾರತದ ಮೊಟ್ಟ ಮೊದಲ ಮಹಿಳಾ ಶಿಕ್ಷಕಿಯಾಗಿದ್ದಾರೆ. ಸಾಮಾಜಿಕ ಬದಲಾವಣೆಯ ಕನಸು ಕಾಣುವುದಕ್ಕು, ಮಾತನಾಡುವುದಕ್ಕು ಬಹಳ ಸುಲಭ. ಆದರೆ ಕಂಡ ಕನಸನ್ನು ನೆನಸು ಮಾಡುವುದು ಮಾತನಾಡಿದಷ್ಟು ಸುಲಭವೇನಲ್ಲ. ಬಹು ಕಷ್ಟಸಾಧ್ಯದ ವಿಚಾರವಾಗಿದೆ. ಕಾರಣ ಸಮಾಜದಲ್ಲಿನ ಆತಂಕ, ಅಂಧಕಾರ, ಅಜ್ಞಾನ, ಮೂಢನಂಬಿಕೆ, ಕಂದಾಚಾರಗಳ ಕಟ್ಟುಪಾಡುಗಳ ಸಂಕೋಲೆಗಳು ಬಿಗಿಯಾದ ಬಂಧನವನ್ನು ಬೆಸೆದಿರುತ್ತವೆ. ಒಂದೊಮ್ಮೆ ಸಮಾಜದಲ್ಲಿನ ಜನ ಪ್ರಜ್ಞಾ ಹೀನ ವ್ಯವಸ್ಥೆಯಲ್ಲಿ ಬದುಕುಳಿಯಬೇಕಿತ್ತು. ಆದರೆ ಸಾಮಾಜಿಕ ಮತ್ತು ಇನ್ನಿತರ ಎಲ್ಲಾ ಕ್ಷೇತ್ರಗಳ ಬದಲಾವಣೆಗೆ ಶಿಕ್ಷಣವೊಂದು ಮೂಲ ಅಸ್ತ್ರವೆನ್ನುವುದನ್ನು ಮನವರಿಕೆ ಮಾಡಿಕೊಡುವ ಮೂಲಕ ಶಿಕ್ಷಣದಿಂದ ಏನೆಲ್ಲವನ್ನು ಸಾಧಿಸಬಹುದು ಎನ್ನುವ ಬಗ್ಗೆ ಸಾಧಿಸಿ ತೋರಿಸಿದ 19ನೇ ಶತಮಾನದಲ್ಲಿನ ಮಹಿಳಾ ಶಿಕ್ಷಣ ಮತ್ತು ಸಬಲೀಕರಣದಲ್ಲಿ ಪ್ರಮುಖ ಪಾತ್ರ ವಹಿಸಿದ ಪ್ರಮುಖ ಭಾರತೀಯ ಸ್ತ್ರೀ ಸಂಕುಲದ ಚಿರಧ್ರುವತಾರೆ, ಸಾಧಕರು, ಸಾಹಿತಿ, ಶಿಕ್ಷಣ ತಜ್ಞೆ, ಸಮಾಜ ಸುಧಾರಕರು ಆದ ಸಾವಿತ್ರಿ ಬಾಯಿ ಫುಲೆಯವರ ಜೀವನ ಗಾಥೆ ಅನನ್ಯವೆನಿಸಿದೆ.

ಸ್ತ್ರೀಯರು ಗೃಹಿಣಿಯಾಗಿರಬೇಕಷ್ಟೇ ವಿನಃ ಅಕ್ಷರಾಭ್ಯಾಸ ಕಲಿತು ವಿದ್ಯಾವಂತರಾಗುವ ಅವಶ್ಯಕತೆ ಇಲ್ಲ ಎಂಬ ಸ್ವಾತಂತ್ರ್ಯ ಪೂರ್ವದಲ್ಲಿನ ಅನಿಷ್ಟ ಪದ್ಧತಿಯ ಸನ್ನಿವೇಶದಲ್ಲಿ ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡಲೇಬೇಕೆಂದು ಶಾಲೆಗಳನ್ನು ತೆರೆದು ತಾವೇ ಶಿಕ್ಷಕಿಯಾಗಿ ವಿದ್ಯೆ ಕಲಿಸುತ್ತಿದ್ದ ಸಾವಿತ್ರಿಬಾಯಿಯವರ ಪರಿಶ್ರಮ ವರ್ತಮಾನದ ಮತ್ತು ಭವಿಷ್ಯದ ಮಹಿಳಾವರ್ಗಕ್ಕೆ ಆದರ್ಶ ಪ್ರಾಯವಾಗಿದೆ.

ಸಾವಿತ್ರಿಬಾಯಿ ಅವರು 1831ರ ಜನವರಿ 3ರಂದು ಮಹಾರಾಷ್ಟ್ರದ ಸತಾರಾ ಜಿಲ್ಲೆಯ ಖಂಡಾಲ ತಾಲ್ಲೂಕಿನ ಒಂದು ಸಣ್ಣ ಹಳ್ಳಿ ನಯಗಾಂವ್ ನಲ್ಲಿ ಜನಿಸಿದರು. ಇವರ ತಂದೆ ಖಂಡೋಜಿ ನೆವಸೆ ಪಾಟೀಲ ಮತ್ತು ತಾಯಿ ಲಕ್ಷ್ಮೀಬಾಯಿ ಸಮಾಜದಲ್ಲಿ ಪ್ರತಿಷ್ಠಿತ ಜಮೀನ್ದಾರರು ಮತ್ತು ಶ್ರೀಮಂತ ಕುಟುಂಬದವರಾಗಿದ್ದರು. ಸಾವಿತ್ರಿಬಾಯಿ ಬಾಲ್ಯದಿಂದಲೇ ಚುರುಕುತನ ಮತ್ತು ಧೈರ್ಯವನ್ನು ಮೈಗೂಡಿಸಿಕೊಂಡಿದ್ದಳು. ಅಂದಿನ ಸಮಾಜದಲ್ಲಿ ಹೆಣ್ಣು ಮಕ್ಕಳು ಶಾಲೆಗೆ ಹೋಗುವಂತಿರಲಿಲ್ಲ. ಶಿಕ್ಷಣ ಪಡೆಯುವಂತಿರಲಿಲ್ಲ. ಮಹಿಳೆಯರು ಅನಕ್ಷರತೆಯ ಕೂಪದಲ್ಲಿ ಬಡತನದ ಬೇಗೆಯಲ್ಲಿ ನರಳುತ್ತಿದ್ದ



ಕಾಲವದು. ಸಾವಿತ್ರಿಬಾಯಿಗೆ ಬಾಲ್ಯದಲ್ಲೆ ಸಮಾಜದ ಹಲವಾರು ಸಮಸ್ಯೆಗಳು ಚಿಂತನೆಗಳಾಗಿ ಕಾಡತೊಡಗಿದವು. ಹೆಣ್ಣು ಮಕ್ಕಳು ಏಕೆ ಅಕ್ಷರ ಕಲಿಯಬಾರದು? ಶಾಲೆಗೆ ಏಕೆ ಹೋಗುವಂತಿಲ್ಲ? ಹೆಣ್ಣು ಮಕ್ಕಳು ಶಾಲೆಗೆ ಹೋಗುವುದರಿಂದ ಯಾರಿಗಾದರೂ ತೊಂದರೆಯಾಗುತ್ತದೆಯೇ? ಹೆಣ್ಣುಮಕ್ಕಳಿಗೆ ಮಾತ್ರ ಈ ನಿರ್ಬಂಧವೇಕೆ? ಹೆಣ್ಣು ಮಕ್ಕಳಿಗೆ ಸ್ವಾತಂತ್ರ್ಯ ಸಮಾನತೆ ಇರಬಾರದೆ? ಹೆಣ್ಣನ್ನು ಆದಿಶಕ್ತಿಯೆಂದು ಪೂಜಿಸಿ ಮನೆಯ ಮೂಲೆಯೊಂದರಲ್ಲಿ ನಿರ್ಬಂಧಿಸುವುದು ಎಷ್ಟು ಸರಿ? ಎಂದೆಲ್ಲಾ ಚಿಂತಿಸುತ್ತಿದಳು.

ಮುಗ್ದ ಬಾಲಕಿ ಸಾವಿತ್ರಿಬಾಯಿ 10ನೇ ವಯಸ್ಸಿನಲ್ಲಿ ಹದಿಮೂರು ವರ್ಷ ವಯಸ್ಸಿನ ಜ್ಯೋತಿ ಬಾ ಫುಲೆ ಅವರನ್ನು ವಿವಾಹವಾದರು. ಅಂದಿನಿಂದ ಸಾವಿತ್ರಿಬಾಯಿ ಫುಲೆಯಾದರು. ಜ್ಯೋತಿ ಬಾ ಫುಲೆಯವರೇ ತಮ್ಮ ಪತ್ನಿ ಸಾವಿತ್ರಿ ಬಾಯಿ ಫುಲೆಯವರಿಗೆ ಶಿಕ್ಷಣ ಕಲಿಸಲು ಪ್ರಥಮ ಗುರುವಾದರು. ಪ್ರಾಥಮಿಕ ಶಿಕ್ಷಣವನ್ನು ಮನೆಯಲ್ಲಿಯೇ ಕಲಿತರು. ಮುಂದಿನ ಶಿಕ್ಷಣಕ್ಕೆ ಉತ್ತೇಜನ ನೀಡುವ ಮೂಲಕ ಸಾವಿತ್ರಿಗೆ ಧೈರ್ಯ ತುಂಬಿ ವಿದ್ಯಾಭ್ಯಾಸಕ್ಕೆ ಪ್ರತಿಷ್ಠಿತ ಸ್ಕಾಟಿಷ್ ಮಿಷನರಿ ಶಾಲೆಗೆ ಸೇರಿಸಿದರು. ಅಲ್ಲಿ ಅವರು ಏಳನೆಯ ತರಗತಿಯವರೆಗೆ ವ್ಯಾಸಂಗ ಮಾಡಿದರು. ಸಾವಿತ್ರಿಬಾಯಿ ಫುಲೆಯವರ ಮುಂದಿನ ವಿದ್ಯಾಭ್ಯಾಸದ ಜವಾಬ್ದಾರಿ ಜ್ಯೋತಿ ಬಾ ಫುಲೆಯವರ ಗೆಳೆಯರಾದ ಸಖಾರಾಮ್ ಯಶವಂತ ಪರಾಂಜಪೆ ಮತ್ತು ಕೇಶವ ಶಿವರಾಮ ಭಾವಲ್ಕರ್ ಅವರ ಮೇಲಿದ್ದು, ಆ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಿದರು. ಸರ್ಕಾರಿ ದಾಖಲೆಗಳ ಪ್ರಕಾರ ಅವರ ತರಬೇತಿಯನ್ನು ಗಮನಿಸಿದರೆ, ಸಾವಿತ್ರಿಬಾಯಿ ಮೊದಲ ಭಾರತೀಯ ಮಹಿಳಾ ಶಿಕ್ಷಕಿ ಮತ್ತು ಮುಖ್ಯೋಪಾಧ್ಯಾಯಿನಿ ಯಾಗಿರಬಹುದು ಎಂದು ತಿಳಿದುಬರುತ್ತದೆ. ಈ ಹಿನ್ನೆಲೆಯಲ್ಲಿ ಅವರ ಜನ್ಮದಿನವನ್ನು ಮಹಾರಾಷ್ಟ್ರದಲ್ಲಿ ಬಾಲಿಕಾ ದಿನ್ ಎಂದು ಆಚರಿಸಲಾಗುತ್ತದೆ.

ಸಾವಿತ್ರಿಬಾಯಿ ಫುಲೆಯವರು ಆ ಸಮಯದಲ್ಲಿ ಕ್ರಾಂತಿಕಾರಿ ಸ್ತ್ರೀವಾದಿಗಳಲ್ಲಿ ಒಬ್ಬರಾಗಿದ್ದ ಸಗುಣಾಬಾಯಿ ಅವರೊಂದಿಗೆ ಪುಣೆಯ ಮಹಾರವಾಡದಲ್ಲಿ ಬಾಲಕಿಯರ ಶಾಲೆಯಲ್ಲಿ ಕಲಿಸಲು ಪ್ರಾರಂಭಿಸಿದರು. 1851 ರಲ್ಲಿ ಸಾವಿತ್ರಿಬಾಯಿ ಫುಲೆ ಮತ್ತು ಜೋತಿಬಾ ಫುಲೆಯವರು ಪುಣೆಯಲ್ಲಿ ಹೆಣ್ಣುಮಕ್ಕಳಿಗಾಗಿ ಮೂರು ವಿಭಿನ್ನ ಶಾಲೆಗಳನ್ನು ಪ್ರಾರಂಭಿಸಿ ನಡೆಸುತ್ತಿದ್ದರು. ಮೂರು ಶಾಲೆಗಳಿಂದ ಸೇರಿ ಸುಮಾರು ಒಂದು ನೂರ ಐವತ್ತಕ್ಕೂ ಹೆಚ್ಚು ವಿದ್ಯಾರ್ಥಿನಿಯರು ದಾಖಲಾಗಿದ್ದರು. ಮುಂದಿನ ದಿನಗಳಲ್ಲಿ ಸಾವಿತ್ರಿಬಾಯಿ ಫುಲೆಯವರು ಹದಿನೆಂಟು ಶಾಲೆಗಳನ್ನು ತೆರೆದು ವಿವಿಧ ಜಾತಿಗಳ ಮಕ್ಕಳಿಗೆ ಅವಕಾಶ ಕಲ್ಪಿಸಿ ಅವರಿಗೆ ವಿದ್ಯೆ ಕಲಿಸಿದರು. ಸಾವಿತ್ರಿಬಾಯಿ ಮತ್ತು ಫಾತಿಮಾ ಶೇಖ್ ಅವರು ಮಹಿಳೆಯರಿಗೆ ಮತ್ತು ದೀನದಲಿತ ಜಾತಿಗಳ ಇತರ ಜನರಿಗೆ ಕಲಿಸಲು ಪ್ರಾರಂಭಿಸಿದರು. ದಲಿತರ ಶಿಕ್ಷಣದ ವಿರುದ್ಧ ವಿಶೇಷವಾಗಿ ಪುಣೆಯ ಮೇಲ್ಜಾತಿಯವರು ಇದನ್ನು ಅನೇಕರು ಸರಿಯಾಗಿ ಸ್ವೀಕರಿಸಲಿಲ್ಲ. ಸಾವಿತ್ರಿಬಾಯಿ ಮತ್ತು ಫಾತಿಮಾ ಶೇಖ್ ಅವರನ್ನು ಸ್ಥಳೀಯರು ಬೆದರಿಕೆ ಹಾಕಿದರು ಮತ್ತು ಸಾಮಾಜಿಕವಾಗಿ ಕಿರುಕುಳ ಮತ್ತು ಅವಮಾನ ಮಾಡಿದರು. ಸಾವಿತ್ರಿಬಾಯಿ ಫುಲೆ ಶಾಲೆಯತ್ತ ಹೆಜ್ಜೆ ಹಾಕಿದಾಗ ಅವರ ಮೇಲೆ ಹಸುವಿನ ಸಗಣಿ ಮತ್ತು ಗಂಜಲ, ಮಣ್ಣು, ಕಲ್ಲುಗಳನ್ನು ಎಸೆದರು. ಅಂತಹ ದೌರ್ಜನ್ಯಗಳನ್ನು ಅನುಭವಿಸಿದಾಗ್ಯೂ ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡುವ ತನ್ನ ಗುರಿಯಿಂದ ಅವರು ಹಿಂದೆ ಸರಿಯಲಿಲ್ಲ. ದೃಢನಿಶ್ಚಯದ ಸಾವಿತ್ರಿಬಾಯಿ ಫುಲೆಯವರನ್ನು ಇದಾವ ಅವಮಾನಗಳೂ ನಿರುತ್ಸಾಹಗೊಳಿಸಲಾರವು ಏಕೆಂದರೆ ಅವರ ನಿರ್ಧಾರ ದೃಢವಾಗಿತ್ತು. ಸಾವಿತ್ರಿಬಾಯಿ ಮತ್ತು ಫಾತಿಮಾ ಶೇಖ್ ಅವರೊಂದಿಗೆ ಸಗುಣಾಬಾಯಿ ಸೇರಿಕೊಂಡರು, ಸಾವಿತ್ರಿಬಾಯಿ ಫುಲೆಯವರು ಅಂತಿಮವಾಗಿ ಶಿಕ್ಷಣ ಚಳವಳಿಯಲ್ಲಿ ನಾಯಕರಾದರು.

ಫುಲೆ ದಂಪತಿಗೆ ಮಕ್ಕಳಿಲ್ಲದ ಕಾರಣ ಅವರು ಯಶವಂತ ರಾವ್ ಎಂಬ ಮಗುವನ್ನು ದತ್ತು ಸ್ವೀಕಾರ ಮಾಡಿದರು. ಆ ದತ್ತುಪುತ್ರ ಯಶವಂತರಾವ್ ಮುಂದೆ ಓದಿ ವೈದ್ಯರಾಗಿ ತಮ್ಮ ಪ್ರದೇಶದ ಜನರಿಗೆ ಸೇವೆ ಸಲ್ಲಿಸಿದರು. 1876 ರ ಸಂದರ್ಭದಲ್ಲಿ ಮಹಾರಾಷ್ಟ್ರದಲ್ಲಿ ಭೀಕರ ಬರಗಾಲ ಬಂದಿತು. ಸಾವಿತ್ರಿ ಬಾಯಿ ಫುಲೆ ಮತ್ತು ಅವರ ಪತಿ 1876 ರಿಂದ ಪ್ರಾರಂಭವಾದ ಬರಗಾಲದ ಸಮಯದಲ್ಲಿ ಬಿಡುವಿಲ್ಲದೆ ಕೆಲಸ ಮಾಡಿದರು. ಅವರು ಊರೂರು ಸುತ್ತಾಡಿ ಸಂತ್ರಸ್ತರಿಗಾಗಿ ಧನ ಸಂಗ್ರಹ ಮಾಡಿದರು. ನಿರಾಶ್ರಿತರಿಗೆ ಬಾಲಾಶ್ರಮವನ್ನು ಪ್ರಾರಂಭಿಸಿದರು. ಬೇರೆ ಮಹಿಳೆಯ ಸಹಕಾರದೊಂದಿಗೆ ಹಸಿವಿನಿಂದ ಬಳಲುತ್ತಿರುವವರಿಗೆ ಆಹಾರ ನೀಡುವ ವ್ಯವಸ್ಥೆಯನ್ನು ಮಾಡಿದರು. ವಿವಿಧ ಪ್ರದೇಶಗಳಲ್ಲಿ ಉಚಿತ ಆಹಾರವನ್ನು ವಿತರಿಸಿದರು ಮಾತ್ರವಲ್ಲದೆ ಮಹಾರಾಷ್ಟ್ರದಲ್ಲಿ 52 ಉಚಿತ ಆಹಾರ ವಸತಿ ಗೃಹ ಪ್ರಾರಂಭಿಸಿದರು. 1897ರ ಸಮಯದಲ್ಲಿ ಪರಿಹಾರ ಕಾರ್ಯವನ್ನು ಪ್ರಾರಂಭಿಸಲು ಸಾವಿತ್ರಿಬಾಯಿ ಬ್ರಿಟಿಷ್ ಸರ್ಕಾರವನ್ನು ಮನವೊಲಿಸಿದರು.

1897ರಲ್ಲಿ ಮಹಾರಾಷ್ಟ್ರದ ಸುತ್ತಮುತ್ತಲಿನ ಪ್ರದೇಶವನ್ನು ವ್ಯಾಪಕ ಸಾಂಕ್ರಾಮಿಕ ಪ್ಲೇಗ್ ರೋಗವು ಹರಡಿತು. ವಿಶ್ವದಾದ್ಯಂತ ಮೂರನೇ ಅಲೆಯಾಗಿ ಪ್ಲೇಗ್ ಸಾಂಕ್ರಾಮಿಕ ರೋಗವು ಕೆಟ್ಟದಾಗಿ ಬಾಧಿಸಿದಾಗ, ಧೈರ್ಯಶಾಲಿ ಸಾವಿತ್ರಿಬಾಯಿ ಮತ್ತು ಯಶವಂತರಾವ್ ರೋಗದಿಂದ ಸೋಂಕಿತ ರೋಗಿಗಳಿಗೆ ಚಿಕಿತ್ಸೆ ನೀಡಲು ಪುಣೆಯ ಹೊರವಲಯದಲ್ಲಿ ಚಿಕಿತ್ಸಾಲಯಗಳನ್ನು ತೆರೆದರು. ರೋಗಿಗಳನ್ನು ಚಿಕಿತ್ಸಾಲಯಕ್ಕೆ ಕರೆತಂದರು. ಅಲ್ಲಿ ಅವರನ್ನು ಶುಶ್ರೂಷೆ ಮಾಡುತ್ತಿದ್ದರು. ಹೀಗೆ ಸೇವೆ ಮಾಡುತ್ತಿರುವಾಗ ಸ್ವತಃ ಇವರೇ ಪ್ಲೇಗ್ ರೋಗಕ್ಕೆ ತುತ್ತಾಗಿದರು. ಅದರಿಂದ ಚೇತರಿಸಿಕೊಳ್ಳಲಾಗದೆ ಮಾರ್ಚ್ 10, 1897 ರಂದು ನಿಧನರಾದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248